"Service of the Poor is the Service of God".

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

A HIGH CLASS RUPEE-MAGAZINE TO SUIT ALL INTERESTS.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯ ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, ಒಗಟು, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು. ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧. | ತಾರೀಕು ೧ನೇ ದಶಂಬರ ೧೯೩೨. | ಸಂಚಿಕೆ ೮.

ಬಡವ ನಾ ಬಂದಿಹೆನು,
ಕೊಡಿರೆನಗೆ ಭಿಕ್ಷೆಯನು
ಪಾಪವಲ್ಲೆ?
ಉದರ ತಾಪವಲ್ಲೆ?

ನಡುಗುತಿದೆ ಕೈಕಾಲು,
ಹಾಳೆನ್ನ ಈ ಬಾಳು,
ನಿಲ್ಲಲಾರೆ,
ನರಕವಿದೆಯೊ ಬೇರೆ!

ಲುಂಗಿಯೊಂದುಟ್ಟಿರುವೆ,
ಮೊನ್ನೆ ನಾನುಂಡಿರುವೆ,
ದಾರಿಗಾಣೆ,
ಅರಿವರಾರು ಬೇನೆ?

ಮುಟ್ಟಲಾರಿರಿ ಎನ್ನ,
ಕೊಟ್ಟುಬಿಡಿ ಪೈಯನ್ನ,
ಹೋಗಿಬರುವೆ,
ನನ್ನ ವ್ಯಥೆಯ ಮರೆವೆ.

—ಬಿ. ನರ್ಸಪ್ಪ.



ಈ ಬಡ "ಅಸ್ಪೃಶ್ಯನ ಗೋಳಿ"ಯನ್ನು ಪ್ರಥಮ ಪುಟದಲ್ಲಿ ಓದುವುದು.

"ಬಡತನವು ಅವರವರ ಪಾಪದ ಫಲವೆಂಬ ಒಂದು ಗ್ರಹಿಕೆಯಾಗಿ ಬಿಟ್ಟಿದ್ದರಿಂದಲೆ, ಇದುವರೆಗೂ ಯಾರೂ ಅದನ್ನು ನಿರ್ನಾಮವಾಗಿ ಮಾಡಲು ಪ್ರಯತ್ನಪಟ್ಟಿಲ್ಲ. ಒಂದು ಸಮಾಜದಲ್ಲಿ ಬಡವರಿರುವುದು ಆ ಸಮಾಜಕ್ಕೆ ಕೊರತೆ. ಬಡತನವು ಸಾಂಕ್ರಾಮಿಕ ರೋಗ, ಆದರೆ ಪ್ಲೇಗುಗೀಗುಗಳಂತಲ್ಲ. ಪ್ಲೇಗಿನ ಸಂಪರ್ಕದಿಂದ ಪ್ಲೇಗೇ ಬರುವುದಲ್ಲದೆ ಕಾಲರಾ ಬರಲಾರದು. ಆದರೆ ಬಡತನವು ಒಂದು ವಿಚಿತ್ರ ರೋಗ. ಬಡವರು ದೀನರಾದಂತೆ ಬಲ್ಲಿದರಲ್ಲಿ ಸೊಕ್ಕು ಹೆಚ್ಚು. ಅವರು ದಿಟ್ಟರಾದರೆ ಇವರಿಗೆ ಹೆದರಿಕೆ. ಅವರು ಹಕ್ಕಿನ ತಿರುಕರಾದರೆ ಇವರು ಶಾಸ್ತ್ರದ ಧಾರ್ಮಿಕರು. ಅವರು ನಿರುಪದ್ರವಿಗಳಾದ ಕೂಲಿಕಾರರಾದರೆ, ಇವರು ಜಂಭದ ಪರೋಪಕಾರಿಗಳು. ಅಂತೂ ಅವರಿಗೊಂದು ವಿಕಾರ; ಇವರಿಗೊಂದು ವಿಕಾರ. ಒಂದು ಗುಣವಾಗದೆ ಇನ್ನೊಂದು ಗುಣವಾಗದು. ಬಡತನವು ಸಾಮಾಜಿಕ ಪಾಪವೆಂದು ತಿಳಿಯದ ಹೊರತು ಮನುಷ್ಯನಿಗೆ ಮುಂದೆ ಗತಿಯಿಲ್ಲ. ಬಡತನವು ಅವರವರ ಪಾಪದ ಫಲವೆಂಬುದು ತ್ರೇತಾಯುಗದಲ್ಲಿ ಠಬಹುದು! ಈ ಯುಗದಲ್ಲಿ ಅಲ್ಲ. ಭೂಮಿತಾಯಿಯು ಬಡವಿಯಲ್ಲ. ಅವಳು ಕಾಳಿನ ಕಣಜ; ಹಣದ ಕಣಿ. ಅವಳ ಮಕ್ಕಳಿಗೆ ಬಡತನವೆಂದರೇನು? ಮೈಗಳ್ಳತನದಿಂದಲೇ ಬಡತನವು— ಎಂಬ ಮಾತಿನಲ್ಲಿ ಸತ್ಯಕ್ಕಿಂತ ಸುಳ್ಳೇ ಹೆಚ್ಚಾಗಿದೆ."

—ದ. ರಾ. ಬೇಂದ್ರೆ.

(ಪಡಿಯಚ್ಚು "ನವಯುಗ"ದ ಕೃಪೆಯಿಂದ.)

X'MAS TIME!

ಇದೋ ಇತ್ತ ನೋಡಿ! ಇದೋ ಇತ್ತ ನೋಡಿ!

ಎಂ. ಎಸ್. ನಾಯಕ್ ಎಂಡ್ ಎಂ. ಚೆಂದಪ್ಪ,

ಟೈಲರ್ಸ್, ರಥಬೀದಿ, ಮಂಗಳೂರು.



ಅತ್ಯುತ್ತಮವಾದ ಬೇಬಿ ಫ್ರೋಕ್, ಲೇಡಿ ಗವನ್, ಜಂಪರ್ಸ್, ಸೈಲರ್ ಸೂಟ್, ಸಿಮಿಸ್, ಬೋಡಿಸ್, ಪೆಟ್ಟಿಕೋಟ್, ತೊಟ್ಟಿಲಿನ ತಟ್ಟೆ ಅದಕ್ಕೆ ಬೇಕಾದ ಇನ್ನಿತರ ಗಿಳಿ ವಗೈರೆ ಎಲ್ಲಾ ತರದ ಉಡುಗೆತೊಡಿಗೆಗಳು ನಮ್ಮಲ್ಲಿ ರೆಡಿಮೇಡ್ ಇದೆ. ವಿನಹಾ ಒರ್ಡರು ಪ್ರಕಾರ ಅವುಗಳನ್ನು ಹೊಲಿದು ಕೊಡಲೂಬಹುದು.

ತರಬೇತಿಯುಳ್ಳ ಹೊಲಿಗೆಗಾರರು! ಅತ್ತಿತ್ತ ಹೋಗಬೇಡಿ!

ಎಮ್. ಗಣಪಯ್ಯ ಎಂಡ್ ಸನ್ಸ್,

ರಥಬೀದಿ, ಮಂಗಳೂರು, ದ. ಕ.

56 ವರ್ಷಗಳ ಉತ್ತಮ ಅನುಭವಸಿದ್ಧ ಔಷಧಗಳು. ಕೆಳಗಿನದಲ್ಲದೆ ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು.

ಧಾತುಪುಷ್ಟಿ ಲೇಹ.

ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ಒಳಜ್ವರ, ಮಲಮುದ್ಧತೆ, ಮೊದಲಾದವುಗಳು ಪೂರ್ಣ ಗುಣವಾಗಿ ದೇಹಕ್ಕೆ ಕಾಂತಿಯನ್ನೂ, ಚೇತನವನ್ನೂ ಕೊಡುವ ನವಶಕ್ತಿಯ ಲೇಹ.

ಕ್ರಯ ಡಬ್ಬಿ 1ಕ್ಕೆ 2-8-0. 3 ಡಬ್ಬಿಗಳಿಗೆ 7-0-0.

ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳಿತ ಮುತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಕ್ರಯ ಒಂದು ಬಾಟ್ಲಿ ಔಷಧಕ್ಕೆ ರೂ. 1-4-0.

ಒಂದು ಡಬ್ಬಿ ಮಾತ್ರೆಗೆ ರೂ. 1-0-0.

ಮೂರು ಬಾಟ್ಲಿ ಮುತ್ತು ಡಬ್ಬಿಗಳಿಗೆ ರೂ. 6-4-0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ.

ಬಾಳಂತಿಯರಿಗೂ, ಕೂಸುಗಳಿಗೂ ಇದರಂತಹ ಇನ್ನೊಂದು ಔಷಧ ಇಲ್ಲ. ಪ್ರಸವಾಯಾಸ ಬಾಳಂತಿ ಕುತ್ತು ಮೊದಲಾದುವುಗಳನ್ನು ಹೋಗಲಾಡಿಸಿ, ಬಾಳಂತಿಯರು ಹಿಂದಿನ ನವಯೌವನವನ್ನು ಹೊಂದುವರು. ಕೂಸುಗಳು ಹೃಷ್ಟಪುಷ್ಟರಾಗಿ ಬೆಳೆದು ಆನಂದಾಯಕರಾಗುವ ಹಾಗೂ ಮಾಡುವ ಸುಪ್ರಸಿದ್ಧ ಔಷಧ.

ಬಾಟ್ಲಿ 1ರ ರೂ. 1-8-0.

ಎರಡು ಬಾಟ್ಲಿಗಳಿಗೆ ರೂ. 3-0-0.

ಮಲೇರಿಯಾ ನಿವಾರಿಣಿ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ದಿನ ಯಾ ಎರಡು ದಿನ ಬಿಟ್ಟು ಬರುವ ಜ್ವರ ಚಾತುರ್ಥಿಕ ಜ್ವರ, ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳು ಹೋಗಲಾಡಿಸಲ್ಪಟ್ಟು ಸಂಪೂರ್ಣ ಆರೋಗ್ಯವು ಲಭಿಸುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 1-8-0.

ಮೂರು ಬಾಟ್ಲಿಗಳಿಗೆ ಕ್ರಯ ರೂ. 4-2-0.

ಮಾಹಿತಿ ಬಗ್ಗೆ ಕೆಟಲಾಗಿಗೆ ಬರೆದು ತರಿಸಿಕೊಳ್ಳಿರಿ.

"ಬಡವರ ಸೇವೆಯೇ ಭಗವಂತನ ಸೇವೆ."

ಯಾವ ಜಗತ್ತು ಸರ್ವ ಶಕ್ತಿಯುತನಾದ ಭಗವಂತನ ಕರುಣಾ ಕಟಾಕ್ಷದಿಂದ ಸದಾ ರಕ್ಷಿಸಲ್ಪ

ESTABLISHED 1932.

"ಬಡವರ ಬಂಧು"

ಉತ್ತಮೋ, ಅಂತಹವನ ಪಾದಾರವಿಂದಕ್ಕೆ ಭಕ್ತಿಯಿಂದ ಮಣಿಯುವೆನು.

ಸಂಪುಟ ೧. | ತಾರೀಕು ೧ನೇ ದಶಂಬರ ೧೯೩೨. | ಸಂಚಿಕೆ ೮.

ಅಸ್ಪೃಶ್ಯರ ಮೊರೆ.

ಹಿಂದುಗಳೆ! ಹಿಂದುಗಳೆ! ನೀ ಪೊರೆವುದೆಮ್ಮ ।
ಬಂಧುಗಳು ನೀವಲ್ಲದಿನ್ನಾರು ನಮ್ಮಾ? ॥ ಪಲ್ಲ ॥
　ಹಿಂದುಳಿದ ನಮ್ಮ ಬಂಧವು ತೊಲಗುವಂತೆ ।
　ಮುಂದರಿದು ಬನ್ನೀಗ ನರವೀರರಂತೇ. ॥ ಅ. ಪ. ॥
ಅಂಧಕಾರವ ಚಂದ್ರ ತಾ ದಹಿಸೊ ತೆರದಿ, ।
ಅಂಧ ರೂಢಿಯ ಬಂಧನವ ದಹಿಸಿ ಮುದದೀ, ॥
ದಾರಿದ್ರ್ಯ ನಿಜ ಬುದ್ಧಿಮಾಂದ್ಯತೆಯ ಕಂಡು ।
ಕರಗಲಾರದೆ ಪೇಳಿ ನಿಮ್ಮೆದೆಯು ಗುಂಡೂ? ॥ ೧ ॥
　ಕೊಳಕರಿವರೆಂದೆಮ್ಮ ನೀವರಿತ ಬಳಿಕಂ ।
　ಕಲಿಸಬೇಡವೆ ನಮಗೆ ನೈರ್ಮಲ್ಯ ಶುಚಿಯಂ? ॥
　ವಿದ್ಯಾದಿ ಗುಣ ಬುದ್ಧಿ ನಿಧಿಯುಕ್ತರಲ್ಲೆಮಗೆ ।
　ಉದ್ಧರಿಸದಿರುವಲ್ಲಿ ಪಾತಕವು ನಿಮಗೇ! ॥ ೨ ॥
ನಾಯ್ಗಳನು ಮುದ್ದಿ ನಲಿದಾಡುವಿರಿ ನೀವು, ।
ನ್ಯಾಯವಿಲ್ಲದೆ ನಮ್ಮ ಹೀನೈಸಬಹುದೇ? ॥
ಪತಿತರೆಲ್ಲರು ನಾವು ಕ್ರಿಸ್ತರಾದರೆ, ನಿಮ್ಮ ।
ಹಿತದಿಂದ ಸ್ಪರ್ಶಿಸುವ ಉತ್ತಮದ ನರರೇ? ॥ ೩ ॥
　ಮುಟ್ಟುವಿರಿ ಗೋಭಕ್ಷ ಕ್ರಿಸ್ತ ಯವನರನು ।
　ಅಟ್ಟುವಿರಿ ಛೀ ನೀಚರೆಂದೆಮ್ಮ ನೀವೂ! ॥
　ಹಿಂದುಧರ್ಮದೊಳೆಮ್ಮ ಉನ್ನತಿಗೆ ಸ್ಥಳವಿಲ್ಲ ।
　ಪಾದರಿಯ ಮತದಲ್ಲೆ ನಮಗಿಹುದು ಸೌಖ್ಯ. ॥ ೪ ॥
ರಾಮಕೃಷ್ಣಾದಿಗಳ ಭಕ್ತರೆಮ್ಮನು ನೀವು ।
ಪ್ರೇಮವಿಲ್ಲದೆ ದೂಡುವಿರಿ ಅನ್ಯಮತಕೆ. ॥
ಕ್ರೈಸ್ತರಾದೊಡೆ, ನಮ್ಮ ಕರೆಯುವಿರಿ ಬಾಯೆಂದು ।
ಹಸ್ತಲಾಘವದಿಂದ ನಿಮ್ಮ ಮನೆಗಳಿಗೆ ॥ ೫ ॥
　ಲಕ್ಷಾದಿ ಜನರಿಂತು ಕ್ರೈಸ್ತರಾದರು ಹಿಂದೆ ।
　ತಕ್ಷಣವೆ ಎದುರಾಗಿ ಪ್ರತಿಪಕ್ಷ ವಹಿಸಿ; ॥
　ಲೆಕ್ಕವಿಲ್ಲದ ರೀತಿ ದಲಿತಬಾಂಧವರೆಮ್ಮ ।
　ದಿಕ್ಕುದೆಸೆ ಕಾಣದೆಯೆ ಕಂಗೆಟ್ಟರು. ॥ ೬ ॥
ಹಿಂದುಗಳೆ! ಹಿಂದುಗಳೆ! ನಿಮಗೇಕೆ ದಯವಿಲ್ಲ? ।
ಮನವರಿತು ಉದ್ಧರಿಸಿ ಘನ ಆರ್ಯರಂತೇ. ॥
ತನುಮನದ ಧನದಿಂದ ಗುಣವಿತ್ತು ರಕ್ಷಿಸುತೆ ।
ಅನುಜಪ್ರೇಮದಿ ಮನುಜರಂತೆಮ್ಮ ತಿಳಿದೂ. ॥ ೭ ॥
　ನಾವು ಮಾಡಿದ ಪಾಪವಿನ್ನೆಷ್ಟು ಘನವೋ? ।
　ಕಾವರಿಲ್ಲವೆ ಹಿಂದುಧರ್ಮದೊಳು! ನಿಜವೇ? ॥
　ನಾವೆಂತು ತ್ಯಜಿಸಲೀವರ ಹಿಂದು ಧರ್ಮವನು ।
　ಹಾವಿಧಿಯೆ! ಹಾವಿಧಿ! ಸನಾತನದ ಬಾಳೆ! ॥ ೮ ॥

ವಿ. ಸತ್ಯಾರ್ಥಿ, ಸಿದ್ಧಾಂತ ವಿಶಾರದ.

ಉಪದೇಶಾಮೃತ.

ಹೇ ಧನಿಕ!
ಬಡವರತಿ
ಬಳಲುವುದ
ನೋಡುತ್ತ
ಕುರುಡನಾಗಿಹೆ
　　ಕೇಳು!
ಲಕ್ಷ್ಮೀದೇವಿಯ ಚಿತ್ತ
ಸ್ಥಿರವೆಂದು
ಯೆಣಿಸದಿರು—
ತಿರುಗುವಳು
ತ್ವರೆಯಿಂದ;
　　ನೋಡಿಹೆಯ;
ಜಲಯಂತ್ರ
ಚಕ್ರಕ್ಕೆ
ಬಿಗಿದಿರುವ
ಕೊಡಗಳನು?
ಚಕ್ರ ತಾ
　　ತಿರುಗುತಿರೆ,
ಮೇಲ್ಬರುವ
ಮಡಕೆಗಳು
ನೀರಿಂದ
ತುಂಬುವುವು;
ಕೆಳಗಿಳಿಯೆ
　　ಬರಿದಾಗಿ
ಜಲತಳವ
ಮುಟ್ಟುವುವು;
ಅದ ನೆನೆಯೆ!
ಇಂದು ನೀನಿದ್ದಂತೆ
ಎಂದೆಂದು ಇರಲಾರೆ;
　　ಬಂಧು! ನೀನೇಳು!!
ಬಡವರಿಗೆ ಕೈಯಾರೆ
ದಾನಧರ್ಮವ ಮಾಡಿ
ಘಳಿಸೀಗ ಪುಣ್ಯವನು,
ಹೀನ ನರನಾದರೂ ಪಡೆವೆ
ನಿಜಸ್ವರ್ಗವನು!

ಪಿ. ಕೃಷ್ಣಯ್ಯ.

Light brings light not darkness and nobility done with a noble purpose will be twice rewarded—*Gandhi.*

ಪ್ರಪಂಚದ ಬಡತನ.

(ಸಂಪಾದಕೀಯ.)

ಆಧುನಿಕ ಕಾಲದಲ್ಲಿ ಎಲ್ಲಿ ನೋಡಿದರೂ ಕ್ರಾಂತಿ. ಹಿಂದೂದೇಶವಂತೂ ನವ ಕ್ರಾಂತಿಗೊಳಗಾಗಿದೆ. ಇಂಗ್ಲಾಂಡು, ಫ್ರಾನ್ಸು, ಜರ್ಮನಿ, ಜಾಪಾನು, ಅಮೇರಿಕಾ ಮೊದಲಾದ ದೇಶಗಳು ಕ್ರಾಂತಿಯ ದವಡೆಯೊಳಗೆ ಸಿಕ್ಕಿಕೊಂಡಿವೆ. ಯಂತ್ರಪಿಶಾಚಿಗಳ ರಂಗಸ್ಥಳವಾದ ಪಾಶ್ಚಾತ್ಯದೇಶಗಳಲ್ಲಿ ದಿನೇ ದಿನೇ, ಗಿರಣಿ, ಬೇಂಕು, ವ್ಯಾಪಾರ ವಾಣಿಜ್ಯ ಸಂಸ್ಥೆಗಳು ಎಣ್ಣೆಯಿಲ್ಲದ ದೀಪಸಾಲಿನಂತೆ ನಂದಿ ಮಾಯುವಾಗುತ್ತಿವೆ. ಪ್ರಪಂಚವನ್ನಾವರಿಸಿರುವ ವ್ಯಾಪಾರ ಮಾಂದ್ಯವು ಧನಿಕರನ್ನೂ ಬಡವರನ್ನೂ ನುಚ್ಚುನೂರು ಮಾಡುತ್ತಲಿದೆ.

ದಿನಗಳು ಕಳೆಯುತ್ತಾ ಧನಾಭಾವದ ರಕ್ಕಸನ ಕಾಲು ಬಡವರ ಹೊಟ್ಟೆಯ ಮೇಲೆ ಬೀಳುತ್ತಿದೆ. ಇದರಿಂದಾಗಿ ಇಂಗ್ಲೆಂಡು, ಜರ್ಮನಿಗಳ ಬಡವರು ಎಚ್ಚತ್ತರು. ಕಳೆದ ತಿಂಗಳಲ್ಲಿ ಲಂಡನಿನಲ್ಲಿ ಮಹಾ ಕ್ಷೋಭೆ! ಕೂಲಿಗಾರರ ಮಜೂರಿಗೆ ಕೊಡಲಿಯಿಟ್ಟುದ್ದಕ್ಕಾಗಿ ೫೦,೦೦೦ ಬಡ ಕೂಲಿಗಾರರು ಮುಷ್ಕರ ಹಿಡಿದು ಸಿಕ್ಕ ಸಿಕ್ಕ ವಾಹನಗಳನ್ನು ತಡೆದು ನಿಲ್ಲಿಸಿ, ಲೂಟಿ ಮಾಡಿದರು. ಕಂಡ ಕಂಡ ಅಂಗಡಿಗಳನ್ನು ಹೊಕ್ಕು, ಇದ್ದುಬದ್ದುದನ್ನು ದೋಚಿಕೊಂಡರು. 'Hunger Marchers' ಎಂಬ ಹೆಸರಿನಿಂದ ಹಸಿವುಗೊಂಡವರು ಒಂದು ಮಹಾ ಮೆರವಣಿಗೆಯನ್ನು ಮಾಡಿ, ದೊಡ್ಡ ದೊಡ್ಡ ಅಧಿಕಾರಿಗಳ ಮನೆಮಠಗಳನ್ನೋ, ಸರಕಾರಿ ಆಫೀಸುಗಳನ್ನೋ, ಮಂತ್ರಿಮಂಡಲವನ್ನೋ, ಅದರ ಸದಸ್ಯರನ್ನೋ ಪಿಕೆಟ್ ಮಾಡಿ, ಕಲ್ಲುಮುಳ್ಳುಗಳನ್ನು ಕೈಗೆ ತೆಗೆದುಕೊಂಡರು. "Manchester Contingent fighting against starvation!" "Lanchashire youth Contingent fight the starvers" ಎಂಬ ಕ್ರಾಂತಿಯ ಉಬ್ಬನ್ನು ಹುಟ್ಟಿಸುವ ದೊಡ್ಡ ದೊಡ್ಡ ಜಾಹೀರಾತುಗಳನ್ನು ಹಿಡಿದು ಊರಲ್ಲೆಲ್ಲ ಮೆರವಣಿಗೆ ಮಾಡಿದರು. ಪೋಲೀಸರು ಜನರ ದೊಣ್ಣೆಯೇಟುಗಳಿಗೆ ತಲೆಬಾಗಬೇಕಾಯಿತು. ಹೆನ್ನಿಂಗ್ಟನ್ ಎಂಬ ಕೂಲಿಪಕ್ಷದ ಮುಖಂಡನನ್ನು ಸೆರೆಹಿಡಿದರು. ೬೦೦ ಮಂದಿಗಳನ್ನು ದಸ್ತಗಿರಿ ಮಾಡಿದರು. ಎಲ್ಲವೂ ಹೊಟ್ಟೆಯ ತಣ್ಪಿಗಾಗಿ!

I believe in loving my enemies. I believe in the power of suffering to melt the stoniest heart. Islam, Hinduism, Sikhism, Christianity, Zoroastrianism and Judaiasm in fact religion itself is on trial. Either we believe in God and His righteousness or we do not, no power on earth can stop the onward march of a peaceful, determined and Godly People.

—*Mahatma Gandhi.*

ಜರ್ಮನಿಯು ಲೋಕದ ಬಡದೇಶಗಳಲ್ಲಿ ಪ್ರಥಮ ಸಾಲಿನದು. ಅಲ್ಲಿ ಪ್ರಜೆಗಳಿಗೂ ಪ್ರಭುತ್ವಕ್ಕೂ ಕೈಕೈ ನಡೆಯುತ್ತಿದೆ. ನಾಜಿಗಳು ಕಮ್ಯೂನಿಷ್ಟರು, ರಾಷ್ಟ್ರಪಕ್ಷೀಯರು, ಮೊದಲಾದ ನಾಲ್ಕೈದು ತಂಡಗಳು ಅಲ್ಲಿ ದಿನ ದಿನವೆಂಬಂತೆ, ಕಂಡಕಂಡಲ್ಲಿ ಎಂಬಂತೆ ತಲೆ ತಾಟಾಡಿಸಿಕೊಳ್ಳುತ್ತಿವೆ. ಕಳೆದ ತಿಂಗಳ ಆದಿಯಲ್ಲಿ ಅಲ್ಲಿಯ ಸರಕಾರವು ಕೂಲಿಗಾರರ ಮಜೂರಿಯನ್ನು ಕಡಿಮೆಮಾಡಬೇಕೆಂದು ಓರ್ಡಿನೆನ್ಸ್ ಒಂದನ್ನು ಜಾರಿಮಾಡಿತು. ಕೂಡಲೇ ಏಳು ಮಿಲಿಯ ಜನರು ಎದ್ದುಕೊಂಡರು. ಪ್ರಜಾಪ್ರಭುತ್ವವನ್ನು ಹೊಂದಿಕೊಂಡವರು ಸ್ವಯಂಪ್ರಭುತ್ವದವರೊಡನೆಯೂ, ಸ್ವಯಂಪ್ರಭುತ್ವವನ್ನು ಹೊಂದಿಕೊಂಡಿದ್ದವರು ಪ್ರಜಾಪ್ರಭುತ್ವದ ಸಹಾನುಭೂತಿಗಾರರೊಡನೆಯೂ ಹೆಣಗಾಡಿದರು. ಕಮ್ಯೂನಿಷ್ಟರು ನಾಜಿಪಕ್ಷದವರೊಡನೆ ಬಡೆದಾಡಿದರು. ಬಡತನದ ಹೊಗೆಯು ರೌದ್ರಾವತಾರದ ಬೆಂಕಿಯಾಗಿ ಪರಿಣಮಿಸಿತು. ಸಾಲದ್ದಕ್ಕೆ ಪೋಲೀಸರ ಗುಂಡು, ಲಾಥಿ ಮತ್ತು ದರ್ಪದ ಸುರಿಮಳೆಯನ್ನು ಕರೆಯಲಾಯಿತು. ಒಬ್ಬ ನಾಜಿಯು ಗುಂಡೇಟಿನಿಂದ ಮಡಿದನು. ಅವನ ನೆತ್ತರಿನಲ್ಲಿ ಅವನ ಪಕ್ಷದವರು ತಮ್ಮ ಪತಾಕೆಯನ್ನು ನೆನೆಯಿಸಿ, ಕೋಪಾಟೋಪದಿಂದ ಭುಗಿಭುಗಿಲೆನ್ನುತ್ತ ಕಾಳನರ್ತನವನ್ನು ಮಾಡಿದರು. ಬಡತನದ ಪರಿಣಾಮವಾಗಿ ರುದ್ರನಾಟ್ಯವೇ ಆಯಿತು.

ಧನಿಕ ದೇಶವಾದ ಅಮೇರಿಕಾದಲ್ಲೂ ಬಡತನದ ಬಂಡಾಟವು ನಡೆಯುತ್ತಿದೆ. ಜಪಾನಿನಲ್ಲಿ ವ್ಯಾಪಾರಮಾಂದ್ಯವುಂಟಾಗಿ ಅಲ್ಲಿಯವರೂ ಗಡಿಬಿಡಿಸುತ್ತಿರುವರು. ಕೂಲಿಪಕ್ಷದವರು ಒಂದು ಪ್ರತ್ಯೇಕ ಸಂಘವನ್ನೇರ್ಪಡಿಸಿಕೊಂಡು ಧನಿಕರ ಮೇಲೇರಿಬರಲು ತಕ್ಕ ಸಮಯ ನಿರೀಕ್ಷಣೆಯಲ್ಲಿರುವರು.

ಈಗ ನೆಮ್ಮದಿಯಿಂದಿರುವುದು ರಷ್ಯಾದೇಶವೊಂದೇ. ಅಲ್ಲಿ ಬಡವರು ಐಶ್ವರ್ಯವಂತರೆಂಬ ಭೇದಕ್ಕೆಡೆಯಿಲ್ಲದಂತಾಗಿದೆ. ಸರಕಾರದ ಕರುಣೆಯಿಂದಾಗಿ ಆಬಾಲವೃದ್ಧರು ದುಡಿದು, ಉಂಡು ಸಮಾನಸ್ಕಂಧತೆಯ ಸುಖೋಪಭೋಗವನ್ನನುಭವಿಸುತ್ತಿರುವರು.

ಪ್ರತಿಯೊಬ್ಬ ವ್ಯಕ್ತಿಯೂ ದುಡಿಯಬೇಕು; ತಮ್ಮ ದೇಶದಲ್ಲಿ ಮೇಲು ಕೀಳೆಂಬ ಭೇದವಿರಬಾರದು; ಆರ್ಥಿಕ ಸ್ಥಿತಿಯಲ್ಲಿ ಪ್ರತಿ ವ್ಯಕ್ತಿಯೂ ಸರಿಸಮಾನತೆಯಿಂದಿರಬೇಕು; ತಮ್ಮ ದೇಶದಲ್ಲಿ ಬಡತನವಿರಬಾರದು ಎಂಬುದೇ ರಷ್ಯಾದ ಪ್ರಜಾಧಿಪತಿಗಳ ಧ್ಯೇಯ. ಸ್ತ್ರೀ ಪುರುಷ ಬಾಲರ ವಿದ್ಯೆ ಆರೋಗ್ಯಗಳಿಗಾಗಿ ಅಲ್ಲಿ ನಡೆಯುವ ಸಾಹಸಕಾರ್ಯಗಳು ಎಂತಹ ಸಂಸ್ಕೃತ ಜನಾಂಗದವರಿಂದಲೂ ಶ್ಲಾಘಿಸಲ್ಪಡುವಂತಹುಗಳೇ. ಸಮಾಜದಲ್ಲಿ ಪುರುಷರಿಗಿರುವಷ್ಟೇ ಶಕ್ತಿ ಸಾಮರ್ಥ್ಯಗಳು ಸ್ತ್ರೀಯರಲ್ಲೂ ಉಂಟಾಗಬೇಕೆಂದೂ, ಅಂತಹ ಶಕ್ತಿ ಸಾಮರ್ಥ್ಯಗಳು ಮಕ್ಕಳುಮರಿಗಳಲ್ಲಿ ಬಾಲ್ಯಾರಂಭದಲ್ಲೇ ಒಡಮೂಡಬೇಕೆಂದೂ ಅಲ್ಲಿ ಉದ್ಯಮವಾಗುತ್ತಲಿದೆ.

ಪ್ರಪಂಚದ ಈ ತೆರನ ದಾರಿದ್ರ್ಯಸಾಗರದಲ್ಲಿ ದೇವರ ಮಕ್ಕಳಾದ ಬಡವರು ಮುಳುಗಲಾರರೆಂದು ಹಾರೈಸಿ, ಅವರಿಗೆ ಶ್ರೇಯಸ್ಸುಂಟಾಗಲೆಂದು ಸರ್ವರೂ ಪ್ರಾರ್ಥಿಸಬಹುದಲ್ಲವೇ?

ಬೆಳಕು.

Virtue should be the aim and end of every life
All else is vain.
Duty should be its dearest friend
If higher life, it would attain.
—Toru Dutt.

ಕುರುಡನಾದ ಪತ್ನಿಸಮೇತಳಾದ ಭಿಕ್ಷುಕಿ— "ಸ್ವಾಮಿ! ನಮ್ಮಿಬ್ಬರಿಗೂ ಒಂದು ಹಿಡಿ ಅಕ್ಕಿ ತಂದು ಹಾಕಲಾರಿರಾ? ಬಹು ಪುಣ್ಯ ಬಂದೀತು."

ಬಾಲಕ:—ಧರ್ಮಬೇಕೇ? ಕೊರಗಬೇಡ. ಸ್ವಲ್ಪ ತಾಳು. ತಾತನೊಡನೆ ಹೇಳುವೆನು, ಒಳಗಿರುವನು.

ಭಿಕ್ಷುಕರು ಬಂದುದನ್ನು ಹುಡುಗನು ಹೋಗಿ ತಂದೆಗೆ ಹೇಳಿದನು.

ತಂದೆ:—ಇಲ್ಲವೆಂದು ಹೇಳು! ಓಡಿಸು, ಅವರನ್ನು!

ಬಾಲಕ:—ತಾತ! ಬೇಡ. ಒಬ್ಬ ಹೆಂಗಸು ಅಳುತ್ತಿರುತ್ತಾಳೆ. ಪಾಪ. ಅವಳನ್ನು ನೋಡಿದರೆ ಎದೆಯೊಡೆಯುತ್ತದೆ.

ತಂದೆ:—ನೀನು ಹೋಗಿ ಏನಿಲ್ಲವೆಂದು ಹೇಳಪ್ಪಾ.! ಪಾಪವೆನ್ನಬೇಡ! ಬೇರೆಯವರನ್ನು 'ಪಾಪ'ವೆಂದು ಹೇಳಬಾರದೆಂದು ನಿನಗೆ ಗೊತ್ತಿಲ್ಲವೇ? ಪಾಪ, -ಯಾರು? ನೋಡುತ್ತೇನೆ ನಾನೊಮ್ಮೆ, ಬಾ!'

ಗಜೇಂದ್ರಬಾಬುವು ಮಗನನ್ನೆಳೆದುಕೊಂಡು ಹೊರಬಂದನು. ಅಂಗಳಕ್ಕೆ ನೋಡಿ, ಕಣ್ಣೊರಸಿಕೊಂಡನು. ಕೈಕಾಲಲ್ಲಿ, ಮೈಗಳಲ್ಲಿ ದೊಡ್ಡ ದೊಡ್ಡ ಹುಣ್ಣುಗಳಿದ್ದ ಒಬ್ಬ ಕುರುಡನ ಕೈಹಿಡಿದು, ಯೌವನೆಯೂ, ಅತ್ಯಂತ ಸುಂದರಿಯೂ ಆಗಿದ್ದ ಒಬ್ಬ ನಾರೀಮಣಿಯು ನಿಂತಿದ್ದಳು. ಅವಳ ಮೈಬಣ್ಣವು ಸುವರ್ಣವನ್ನು ಹೋಲುತ್ತಿತ್ತು. ಅಂಗಪ್ರತ್ಯಂಗಗಳು ಕೋಮಲವಾಗಿಯೂ, ಅಕ್ಷಿಯುಗಗಳು ಶೋಭಾಯಮಾನವಾಗಿಯೂ ಇದ್ದುವು. ಹರಕು ಮುರುಕು ಬಟ್ಟೆಗಳನ್ನುಟ್ಟುಕೊಂಡಿದ್ದರೂ, ಅವಳ ದೇಹದ ಸೊಬಗು ಅಚ್ಚಳಿದಿರಲಿಲ್ಲ.

ವಿಧುರನಾದ ಗಜೇಂದ್ರನು ಅವಾಕ್ಕಾದನು. ಒಮ್ಮೆ ಅವನಿಗೆ ಮೊನ್ನೆ ತಾನೇ ತೀರಿ ಹೋದ ತನ್ನ ಪತ್ನಿಯ ನೆನಪಾಯಿತು. ವಿಪರೀತ-ಅನ್ಯಾಯವಾಗಿ! ಆಲೋಚಿಸಿಕೊಂಡನು. ಮತ್ತು 'ಅಕ್ಕಿ ಬೇಕೆ? ಅದಾರು ನಿನ್ನೊಡನೆ? ಕುರುಡ?" ಎಂದನು.

ಕುರುಡ:—ನಾನೇ ಜೀಯಾ? ನಾನು ಅವಳ ಗಂಡ! ದುರದೃಷ್ಟಶಾಲಿ. ಏನಾದರೂ ಇಕ್ಕಿರಿ, ಪುಣ್ಯಾತ್ಮರೇ, ಹೋಗುವೆವು.

ಗಜೇಂದ್ರ:—'ಒಳಗೆ ಬನ್ನಿ—ಬನ್ನಿ. ಅಕ್ಕಿ ಕೊಡುವೆನು. ತರುಣಿ, ನಿನ್ನ ಹೆಸರು? ಬಾ.'

ಗಜೇಂದ್ರನು (ಸ್ವಲ್ಪ ಆಲೋಚಿಸಿ)—ನಿನ್ನ ಪತಿಯು ಈ ರೀತಿ ಕುರುಡನಾದುದು ಹೇಗೆ? ನಿಮಗೆ ವಿವಾಹವಾಗುವಾಗಲೇ ಅವನು ಹೀಗಿದ್ದನೇ? ಇವೆಲ್ಲ ಅಸಹ್ಯಕರವಾದ ಹುಣ್ಣುಗಳಿರುವವನನ್ನು ನಿನಗೆ ಯಾರು ಮದುವೆ ಮಾಡಿದರು? ನಿನ್ನಂತಹ ರೂಪವತಿಯು ನನ್ನ ಮನೆಯಲ್ಲಿರಬೇಕಿತ್ತು—'

ನರ್ಮದೆ:-(ಸ್ವಲ್ಪ ಯೋಚಿಸಿಕೊಂಡರೂ) ಸ್ವಾಮಿ; ನಾವು ಡಿಲ್ಲಿಯ ಸಜ್ಜನ ಪಾಲಜೀಯವರ ಗುರುಕುಲದಲ್ಲಿ ಬೆಳೆದವರು. ದೇಶದಲ್ಲೆಲ್ಲಾ ಸತ್ಯಾಗ್ರಹ ಚಳವಳವು ತಲೆದೋರಿತಲ್ಲವೇ? ಆಗ ನಮ್ಮ ಸ್ವಾಮಿಜೀಯವರು 'ಇದು ಧರ್ಮಯುದ್ಧ! ಈ ಶಾಂತಿಸಮರಕ್ಕೆ ನಮ್ಮ ಇಡೀ ಆಶ್ರಮವೇ ಸೇರಬೇಕೆಂದು ಅಪ್ಪಣೆಯಿತ್ತರು. ಪಾಪ! ಪುಣ್ಯಾತ್ಮರು! ಈಗ ಕಾರಾಗ್ರುಹದಲ್ಲಿರುತ್ತಾರೆ. ಬ್ರಹ್ಮಚಾರಿಗಳಾದ ನಾವಿಬ್ಬರೂ ಅಲ್ಲದೆ ಮತ್ತಿನ್ನಿತರರೂ ಆ ಚಳವಳಕ್ಕೆ ಸೇರಿದೆವು. ಹಳ್ಳಿಪಳ್ಳಿಗಳಲ್ಲಿ ಸುತ್ತಿ ಮದ್ಯಪಾನ ಬಹಿಷ್ಕಾರ, ಖಾದಿ ಪುರಸ್ಕಾರ, ಉಪ್ಪಿನ ಕರ ನಿರಾಕರಣೆ ಮೊದಲಾದುವುಗಳನ್ನು ಪ್ರಚಂಡವಾಗಿ ಮಾಡಿದೆವು."

ಗಜೇಂದ್ರ:—"ನೀವು ಬ್ರಹ್ಮಚಾರಿಗಳೇ?"

ಕುರುಡ:—"ಅಹುದು"

ನರ್ಮದೆ:—'ಪಿಕೆಟ್ ಮಾಡುವಾಗ, ಹೊತ್ತಿಗೆ ಆಹಾರವಿಲ್ಲ. ಕೆಲವು ದಿನ ಉಪವಾಸವ್ರತವನ್ನು ಮಾಡಿದ್ದೆವು—ನಮ್ಮ ಬ್ರಹ್ಮಚರ್ಯೆಯ ಆಧಾರದಿಂದಲೇ ಬದುಕಿಕೊಂಡೆವಲ್ಲದೆ ಮತ್ತೆ ಬೇರೆಯಲ್ಲ.

ಗಜೇಂದ್ರ:—ಅವನ ಕಣ್ಣುಗಳು ಹೋದುದು ಹೇಗೆ?

ನರ್ಮದೆ:— ಅಕಟಾ! ನೀವೂ ಅದೇ ಪ್ರಶ್ನೆಯನ್ನೆತ್ತಿ ಆ ದೌರ್ಭಾಗ್ಯ ಘಟನೆಯ ನೆನಹು ಮಾಡಿದಿರಾ? ಅದನ್ನು ಕೇಳಬೇಡಿರಿ. ಅದು ನನ್ನ ಭಾಗ್ಯದಿಂದ ಹೋದುದು" ಎಂದು ದುಃಖಿಸಿದಳು.

ಗಜೇಂದ್ರ:-ಹೇಗೆ? ಹೇಳಬಾರದೆ?

ನರ್ಮದೆ:—ಇವರು ಕಳೆದ ವರುಷದ ಪಿಕೆಟಿಂಗಿನಿಂದಾಗಿ ಕಾರಾಗ್ರುಹಕ್ಕೆ ಹೋದರು. ಅಲ್ಲಿನ ಜೈಲರನ ಕೆಲಸಗಾರರಾಗಿ ನೇಮಿಸಲ್ಪಟ್ಟರು- ಒಂದು ದಿನ ಇವರಿಗೆ ಬಾಯಾರಿಕೆಯಾಯಿತು. ಜೈಲರನೊಡನೆ ನೀರನ್ನು ಕೇಳಿದರು. 'ಒಳಗೆ ಹೋಗಿ ಕುಡಿ' ಎಂದನು. ಇವರು ಅವನ ಕೋಣೆಗೆ ಹೋಗಿ, ಶುದ್ಧವಾದ ದೊಡ್ಡ ಗ್ಲಾಸಿನಲ್ಲಿ ಹಾಕಿಟ್ಟಿದ್ದ ನೀರಿನೋಪಾದಿಯಲ್ಲಿದ್ದ ಒಂದು ದ್ರಾವಕವನ್ನು ನೀರೆಂದು ಕುಡಿದರು. ಅದು ಏನೋ 'ಎಸಿಡ್' ಆಗಿದ್ದುದರಿಂದ ಒಡನೆ ಬಾಯಿಯು ಸುಟ್ಟಿತು. ಸ್ವಲ್ಪ ದಿನಗಳಲ್ಲಿ ಈ ಹುಣ್ಣುಗಳು ಮೂಡಿದುವು. ದೃಷ್ಟಿಮಾಂದ್ಯವೂ ಉಂಟಾಗಿ ಅಂಧತ್ವವು ಪ್ರಾಪ್ತವಾಯಿತು.

ಗಜೇಂದ್ರ:—(ಚಡಪಡಿಸುವ ಹೃದಯವುಳ್ಳವನಾಗಿ) ಇನ್ನು ನೀನೇನು ಮಾಡುವೆ? ಅವನೊಡನೆ ಹೇಗೆ ಸುಖಿಯಾಗಿರುವೇ?

ನರ್ಮದೆ:—ಛೆ! ಹಾಗೆನ್ನಬೇಡಿರಿ! ಇವರೊಡನಿರುವುದೇ ನನ್ನ ಮಹದಾಕಾಂಕ್ಷೆ. ಇವರೇ ನನ್ನ ದೈವ. ಸತಿಗೆ ಪತಿಯೇ ದೈವವೆಂಬುದುಂಟಲ್ಲವೇ? ನಾವು ಪ್ರಕೃತದಲ್ಲಿ ಪತಿಪತ್ನಿಯರಂತಿಲ್ಲ. ನಮ್ಮ ಗುರುವಿನಪ್ಪಣೆಯ ಮೇರೆಗೆ ಇವರು ನನಗೆ ಯಜಮಾನರು: ನಾನು ಇವರ ದಾಸಿ. ಹಾಗೆಂದು ಇವರು ನನಗೆ ಮಾರ್ಗದರ್ಶಕರಲ್ಲ. ಈ ಊರುಗೋಲು ಸಮೇತ ಇವರಿಗೆ ನಾನು ಮಾರ್ಗದರ್ಶಕಳು. ಇವರ ಈ ಪಾವನ ಚರಣಕಮಲಗಳಲ್ಲೇ ನಮ್ಮಿರ್ವರ ಆಸ್ತಿಪಾಸ್ತಿ, ಮನೆಮಾರುಗಳಿವೆ. ಭೂಮಿಯೂ ದ್ರವ್ಯವೂ ನಮ್ಮಲ್ಲಿದೆ.

ಗಜೇಂದ್ರ:—ಏನು? ಆಸ್ತಿಪಾಸ್ತಿ, ಭೂಮಿ ಬದುಕುಗಳಿರುವುದಾದರೆ ಬೇಡುವುದೇತಕ್ಕೆ?

ನರ್ಮದೆ:—ಹಾಗಲ್ಲ ಸ್ವಾಮಿ; ಆಸ್ತಿಪಾಸ್ತಿಗಳೆಂದರೆ ಬೇರೆಯಲ್ಲ. ಅವರು ನನಗೆ ಆಸ್ತಿ, ನಾನು ಅವರಿಗಾಸ್ತಿ. ನಮ್ಮ ಕ್ಲೇಶಪರಂಪರೆಗಳ ಜೀವನವೇ ನಮ್ಮ ಭೂಮಿ. ಅವರ ಅಂತರಾತ್ಮನೇ ನನ್ನ ಮನೆ. ನನ್ನ ಹೃದಯವೇ ಅವರಿಗೆ ಮಠ ಈ ಜೀವನವೆಂಬ ಭೂಮಿಯನ್ನಗೆಯಲು ನಮ್ಮ ಮನಸ್ಥೈರ್ಯಗಳೇ ನೇಗಿಲುಗಳು. ಈ ನೇಗಿಲುಗಳು ಭೂಮಿಯನ್ನು ಆಳವಾಗಿ ಉತ್ತು, ನಮ್ಮ ಶ್ರಮವೆಂಬ ನೀರನ್ನು ಇದಕ್ಕೆ ಹಾಕಿದರೆ, ಅಧ್ಯಾತ್ಮಿಕ ವಿಚಾರಗಳೆಂಬ ಪೈರಿನಿಂದ ನಮಗೆ ಚಿರಶಾಂತಿಯೆಂಬ ಬೀಜಗಳು ಲಭಿಸುವುವು. ಚಿರಶಾಂತಿಯ ಈ ಬೀಜಗಳನ್ನು ನಾವು ಬೇಯಿಸಿದರೆ, ಪ್ರಾಮುಖ್ಯವಾದ ಅನ್ನವೆಂಬ ಸಾಯುಜ್ಯವು ನಮಗೆ ದೊರೆಯುವುದು ಇವೇ ನಮ್ಮ ಹೇರಳ ಆಸ್ತಿ. ಬ್ರಹ್ಮಚರ್ಯೆಯೆಂಬ ಮಹಾಶಕ್ತಿಯೇ ನಮಗೆ ಸುಖದಾಯಕವು.

ಗಜೇಂದ್ರ-(ಸ್ವಲ್ಪ ಕಳವಳಿಸಿ, ಕುರುಡನಿಗೆ ಕೇಳದಂತೆ) ನಾನು ವಿಧುರ! ಐಶ್ವರ್ಯವಂತ!

ನರ್ಮದೆ:—ಸಮಾಧಾನಚಿತ್ತದಿಂದ 'ಇನ್ನೊಂದು ಮದುವೆಯಾಗಬಾರದೇ? ಆ ಬಾಲಕನಾರು?'

ಗಜೇಂದ್ರ:—'ನನ್ನ ಮಗ. ನಿನಗೂ ಮಗ'

ನರ್ಮದೆ:—'ಅದು ಹೇಗೆ?'

ಗಜೇಂದ್ರ:—'ನೀನು ಕುರು—ಡ—ನ—ನ್ನು—ಬಿ—ನನ್ನನ್ನು ವಿವಾಹವಾ—'

ನರ್ಮದೆ:—ಇನ್ನೂ ತಾಳ್ಮೆಯಿಂದ 'ಜೀಯಾ, ಹಾಲೆಂದು ಸೇವಿಸಿದುದು ವಿಷವಾಗಿ ಪರಿಣಮಿಸಿತೇ? ಹಗ್ಗವೆಂದು ಹಿಡಿದುದು ಕಾಳಸರ್ಪವಾಯಿತೇ? ಮನುಷ್ಯನೆಂದು ಮಾತನಾಡಿದುದು ಮಹಾಭೂತವಾಯಿತೇ? ಪಕ್ಷಿಯೆಂದು ಹಿಡಿಯ

The desire for secrecy has bred cowardice amongst us and has made us dissemble our speech—*Gandhi*.

ಬಡವರ ಭಾಗ್ಯ.

(ಲೇಖಕರು—ಶ್ರೀ. ಎಂ. ವೆಂಕಟಕೃಷ್ಣಪ್ಪ, ಶಿಡ್ಲಘಟ್ಟ.)

ಬಡವರೆಂದು ಆಡದಿರಿ. ಜಗದೊಡೆಯನಿಗೆ ಬೇಕಾದವರು ಅವರು. ಬಡವರ ಭಾಗ್ಯಕ್ಕೆ ಭಾಗ್ಯವಂತರ ಐಶ್ವರ್ಯವು ಏನೂ ಹೆಚ್ಚಿಲ್ಲ. ಬಲ್ಲಿರಾ?:—

ಬ್ರಾಹ್ಮಣನು ಭಿಕ್ಷೆ ಬೇಡಿದ್ದ ಅವಲಕ್ಕಿಯನ್ನು ತಿಂದು ಸ್ವಾಮಿಯು ತನ್ನ ಅರ್ಧ ಭಾಗ್ಯವನ್ನು ಕುಚೇಲನಿಗೆ ಕೊಟ್ಟುದನ್ನು?

ದರಿದ್ರ ವೃದ್ಧೆಯಾದ ಶಬರಿಯು ತಿಂದುಳಿದ ಹಣ್ಣನ್ನು ಶ್ರೀರಾಮನು ತಿಂದು ಮುಕ್ತಿಯನ್ನಿತ್ತುದನ್ನು ?

ವಿಧುರನ ಮನೆಯಲ್ಲಿ ಕೃಷ್ಣನು ಬಾಳೆಯ ಸಿಪ್ಪೆಗಳನ್ನು ತಿಂದು ಹಾಲು ಹೊಳೆ ಹರಿಯಿಸಿದುದನ್ನು ?

ಬಡ ಬ್ರಾಹ್ಮಣ ವಾಲ್ಮೀಕಿಯು ಲೋಕಮಾತೆ ಸೀತೆಯನ್ನು ಸಾಕಿದನೆಂಬುದನ್ನು?

ದರಿದ್ರ ದ್ರೋಣಾಚಾರ್ಯನು ದ್ರುಪದನಿಂದ ಕಿತ್ತುಕೊಂಡಿದ್ದ ರಾಜ್ಯವನ್ನು ದ್ರುಪದ ನಿಗೇ ಕೊಟ್ಟುದುದನ್ನು ?

ಒಂದೇ ಒಂದು ನೆಲ್ಲಿಕಾಯನ್ನು ಪಶ್ಚಾತ್ತಾಪಪೂರ್ಣಳಾಗಿ ದಾನಮಾಡಿದ ಬಡ ಬ್ರಾಹ್ಮಣಿತಿಗೆ ಬಾಲಶಂಕರರು ಗಾಯತ್ರಿಯಿಂದ ಕನಕಾಮಲಕ ವೃಷ್ಟಿಯನ್ನು ಸುರಿಯಿ ಸಿದರೆಂಬುದನ್ನು ?

ಪರದೇಶಿ ವಿಷ್ಣುಶರ್ಮನು ಚಾಣಿಕ್ಯನೆಂಬ ಹೆಸರಿನಿಂದ ಮೌರ್ಯ ಸಾಮ್ರಾಜ್ಯ ಸ್ಥಾಪಕನಾದನೆಂಬುದನ್ನು ?

ಬಡ ಮುದುಕಿಯು ಬೆಂದ ಕಾಳು ಕೊಟ್ಟ ಕಡೆ ಪಾಳಿಯಗಾರನು ಬೆಂಗಳೂರನ್ನು ಕಟ್ಟಿದನೆಂಬುದನ್ನು ?

ಗುಡಿಸಿಲುಗಳಲ್ಲಿ ಅಡಗಿ ಬಡವರ ರೊಟ್ಟಿಗಳನ್ನು ತಿಂದ ಬೇಬರನು ಮೊಗಲ್ ಸಾಮ್ರಾಜ್ಯವನ್ನು ಸ್ಥಾಪಿಸಿದನೆಂಬುದನ್ನು ?

ಹುಮಾಯೂನನ ಪ್ರಾಣವನ್ನುಳಿಸಿ ನೀರು ಹೊರುವವನು ದೆಹಲಿಯ ಸಿಂಹಾಸನ ವನ್ನು ಹತ್ತಿದ್ದುದನ್ನು ?

ಕುದುರೆಯ ಕಾಸ್ತಾರನಾಗಿದ್ದ ಸಾಲಗಾರನ ಮಗ ಹೈದರನು ವೀರಾಗ್ರೇಸರ ನವಾಬನಾದುದನ್ನು ?

ಅಂಗಡಿಯನ್ನಿಡಲು ಜಹಾಂಗೀರನ ಬಳಿ ಅಂಗಲಾಸುತ್ತಿದ್ದ ಆಂಗ್ಲೇಯರು ಅಖಂಡ ಭೂಮಂಡಲ ಸಾರ್ವಭೌಮರಾಗಿರುವರೆಂಬುದನ್ನು ?

ಅಂತು ನೋಡಿದರೆ, ಇಂತಹ ನಿದರ್ಶನಗಳು ಲಕ್ಷಾವಧಿ ದೊರೆಯುವುವು.। ಎಲ್ಲಿ ಯಾವ ಶಕ್ತಿಯು ಇದೆಯೋ ಈಗಲೇ ಹೇಳುವರಾರು? ಹೇಗೂ ಇರಲಿ. ಬಡವರಿಂದ ಭಾಗ್ಯೋತ್ಪಾದನೆಯಾಗಿದೆ. ಆಗಲಿದೆ. ಆಗುತ್ತಡೆ. ಬಡವರನ್ನು ಎಂದೂ ಹಳಿಯ ದಿರಿ. ತುಳಿಯದಿರಿ. ತಿಳಿಯಿರಿ—ವಿ. ವಿ.

ಶ್ರೀ ವಾಣೀ ಮೆರವಣಿಗೆ.

ನೋಡಿರೈ! ಶಾರದಾ ದೇವಿ ಭಜಕಾವಳಿಯ—।
ಕೂಡಿ ವರಗಳ ನೀಡುತಲಿ ಬರುವ ಸೊಬಗ! ॥ ಪಲ್ಲ ॥
ಮೇಳಜನ ಜಯಘೋಷ ದೆಸೆಗಳಲಿ ಪಸರಿಸೆ, ವಿ—।
ಶಾಲಲೋಚನೆ ವಿರಾಜಿಸುತ—ತೇರಿನಲಿ; ॥
ತಾಳಗೀತದಿ ಮುನ್ನ ಸಾಗೆ,—ಜನವೃಂದ, ಹಿಂ—।
ಬಾಲಿಸುವಳಾಲಿ ಮಾಲುತ, ಮುಗುಳು ನಗುತ; ॥ ೧ ॥

ವೇಣಿ ರಾಶಿಯು ಶಿರದಿ ಶೋಭಿಸುತಲಿಹುದು ಹಾ! ।
ಭಾನುಕಾಂತಿಯಲಿ ತೊಳಗುವ ಮಹಾಮುಕುಟ! ॥
ನಾನಾತರಾಭರಣಗಳಲಿ ಮೆರೆಯುತ, ಕಲಾ—।
ದಾನವಂ ಮಾಡುತ, ಮಹಾನಂದದಿಂದಾ! ॥ ೨ ॥

ಇಟ್ಟಕುಂಕುಮ ಪಣೆಯ ಬಟ್ಟವೊಗ ಚೆಲುಬೀರೆ, ।
ಪಟ್ಟೆಬಟ್ಟೆಯ ಜರಿಯ ಕುಪ್ಪಸವ ತೊಟ್ಟು, ॥
ಉಟ್ಟು ನೆರಿವಿಡಿದುವಿರುಗಬ್ಬರದ ಸೀರೆ, ಪೊನ್—।
ಪಟ್ಟೆ ಬಡನಡುವಿಗಿಹ—ದಿಟ್ಟೆ ವಾಗ್ದೇವಿ! ॥ ೩ ॥

ಒಂದು ಕೈಯಲಿ ಜೋಲುತಿಹುದು ಜಪಮಾಲೆ, ಮ—।
ತ್ತೊಂದು ಕೈಯಲಿ ತಾಡ ವಾಲೆ ಹೊತ್ತಗೆಯು: ।
ಚಂದದಿಂದಿನ್ನೊಂದರಲಿ ವೀಣೆವಿಡಿದು, ಮಗ—।
ದೊಂದು ಕೈಯ್ಯಿಂದಿಂಪಿನಿಂದ ಬಾರಿಸುತ! ॥ ೪ ॥

ಎರಗುವೆವು ಶಿರವಾಗಿ ವಿಧಿರಾಣಿ ಚರಣದಲಿ, ।
ವರವನೀಡೆಲೆ! ತಾಯೆ! ಪರಮ ದಯದಿಂದ! ॥
ಸರಸತಿ! ನವಿಲ್ದೇರೆ! ವಿದ್ಯಾಂಬೆ! ಸತತ ಸಂ—।
ಚರಿಸೆಮ್ಮ ರಸನೆಯಲಿ—ಸವಿನುಡಿಯುವಂತೆ! ॥ ೫ ॥

ಹೊ. ರಂಗರಾಯ, ಮಾದರಬೆಟ್ಟು.

ಹೋದುದು ಬಾಣವಾಯಿತೇ? ಅದು ಎದೆಯನ್ನು ಬಿರಿದಿದೆ! ಹರಿದಿದೆ; ಮುರಿದಿದೆ! ದಾನಿಯೆಂದು ನಿಮ್ಮನ್ನು ಶರಣು ಬಂದುದಕ್ಕೆ ನೀವು ಮಹಾ ಹಾನಿಯನ್ನು ಬಯಸುವಿರಿ. ಭಗವಂತನು ನಿಮಗೆ ಶ್ರೇಯಸ್ಸನ್ನೀಯಲಿ! ನಾವು ಹೋಗುವೆವು.'

ಗಜೇಂದ್ರ:—'ಜೋಕೆ! ಬಾ. ಪ್ರಮಾದವಾಗುವುದು ನೋಡು' ಎಂದು ಹೇಳುತ್ತಾ, ಗಾಬರಿಗೊಂಡ ನರ್ಮದೆಯನ್ನು ಹಿಡಿದನು.

ಕುರುಡನು ಕಂಗಾಲಾದನು. ಅತ್ತ ಇತ್ತ ಸರಿಯುವಾಗ ಪಕ್ಕನೆ ಬಿದ್ದು ಬಿಟ್ಟನು. ನರ್ಮದೆಯು ಬೊಬ್ಬಿಟ್ಟಳು. ರೋದಿಸುತ್ತ ಪರಮಾತ್ಮನಲ್ಲಿ ಮೊರೆ ಯಿಟ್ಟಳು.

ಭಗವಂತನು ಕೇಳಿದನು. ತಟ್ಟನೆ ಸಮೀಪವಿರುವ ಬಾಲಕನ ಅಂತರ್ಯವನ್ನು ಸೇರಿದನು. ಮಗುವು ನೆರೆಮನೆಗೆ ಓಡಿತು. ಇನ್‌ಸ್ಪೆಕ್ಟರರನ್ನು ಕರತಂದಿತು ಗಜೇಂದ್ರನು ಶಿಕ್ಷಿಸಲ್ಪಟ್ಟನು.

ವಾಚಕ ಮಹಾಶಯ! ಅದೋ ನೋಡಿರಿ! ಭಿಕ್ಷುಕನಾದ ಗಜೇಂದ್ರನು ಊರು ಗೋಲನ್ನು ಹಿಡಿದು ಈಗ ಆಯುರಾರೋಗ್ಯೈಶ್ವರ್ಯಸಂಪನ್ನರಾದ ನರ್ಮದಾನಂದರ ಅಂಗಳದಲ್ಲಿ ಆ ಬಾಲಕನೊಡನೆ ನಿಂತಿರುವನು. ನರ್ಮದೆಯು ಬಾಲಕನನ್ನು ಮುದ್ದಿ ಸುವಳು. ಆನಂದನಿಗೆ ಗುರುಕುಲದ ಗುರುಕೃಪೆಯಿಂದ, ಅವರ ಆಶೀರ್ವಾದ ಬಲ ದಿಂದ, ದೃಷ್ಟಿಗಳು ಬಂದುವು. ಅಂದಿನ ತನ್ನ ಬ್ರಹ್ಮಚರ್ಯವೃಕ್ಷದ ಫಲವನ್ನು ಪತ್ನಿಯೊಡನೆ ತಿಂದು ಸುಖಜೀವಿಯಾಗಿರುವನು. 'ದೇಶಬಂಧು'ವೆಂದು ವಿಖ್ಯಾತನಾಗಿ ರುವನು. ಪತಿವ್ರತೆಯೇ ಭಾಗ್ಯಲಕ್ಷ್ಮಿ!

ಮ. ಜಾ.(ಕ.)

The liberty of faith, conscience, thought and action which we claim for ourselves must be conceded equally to others.—*Gandhi.*

12!!!

ಲೇಖಕರು:—ಶ್ರೀ। ಬಿ. ಡಿ. ಪುತ್ರನ್, ಹೈದರಾಬಾದ್.

ಬಿ. ಎ. ಪಾಸುಮಾಡಿದೆ. ಸರಕಾರಿ ಸೌಕರಿಗಳಿಗಾಗಿ ಅರ್ಜಿ ಹಾಕಿಹಾಕಿ ಲೇಖನಿಯೇ ಸವೆದುಹೋಯಿತು. ಶಾಯಿಬಾಟ್ಲಿ ಬರಿದಾಯಿತು. ಶಾಯಿ ಬರಿದಾದಂತೆ ನನ್ನ ಆಶೆಯ ಕೊಡವೂ ಬರಿದಾಯಿತು.

ಒಂದು ದಿನ ಇಲ್ಲಿಯ 'ನೇಶನಲ್ ಬುರೋ'ಗೆ ಒಂದು ಅರ್ಜಿ ಹಾಕಿದೆ. ನನ್ನ ಲೇಖನಿಯಲ್ಲೇ ಬಡತನದ ಕಳೆಯನ್ನು ಮೆನೇಜರರಾದ ಮಿ। ರೈಟ್ ದೊರೆಯವರು ಕಂಡರೆಂದು ತೋರುತ್ತೆ—ಮರುದಿನ ನನಗೊಂದು ಕಾಗದ—"ನೀವು ಕೆಲಸಕ್ಕೆ ಕೂಡಲೇ ಹಾಜರಾಗಬೇಕು" ಎಂದು.

ಕೆಲಸಕ್ಕೆ ಸೇರಿದೆ. ನನಗೆ ಅಲ್ಲಿಯ ಗುಮಾಸ್ತರೊಬ್ಬರ ಮಿತ್ರತ್ವವಾಯಿತು. ಗೋಪಾಲ ಕಿಶೋರರೆಂದರೆ ನನ್ನ ಪ್ರಾಣದಂತಾದರು. ಅವರಿಗೆ ನಾನೂ ತ್ರಾಣದಂತಾದೆ. ಇಡೀ ಆಫೀಸಿನ ನಲ್ವತ್ತಾರು ಗುಮಾಸ್ತರುಗಳಲ್ಲಿ ಅವರೇ ನನ್ನ 'ಬಂಧು'ಗಳಂತಾದರು.

ಗೋಪಾಲ ಕಿಶೋರರೆಂದರೆ ಬಡವರಲ್ಲ; ತಂದೆತಾಯಿಗಳು ಶೇಖರಿಸಿಟ್ಟಿದ್ದ ಕೆಲವು ಸಾವಿರ ರೂಪಾಯಿಗಳ ಥೈಲಿಯು ಅವರ ಸ್ವಂತ ಜೇಬಿನಲ್ಲಿದ್ದಂತಿತ್ತು. ಆದರೂ ಆ ಹಣದಿಂದ ಕಿಲುಬು ಹಿಡಿದ ಒಂದು ಪೈಯನ್ನಾದರೂ ಅವರು ನನಗಾಗಿ ವೆಚ್ಚಮಾಡಿದುದಿಲ್ಲ! ನಾನಾದರೋ, ಅವರ ಊಟಉಪಚಾರಗಳಿಗೆ, ಕಾಫಿಫಲಾಹಾರಗಳಿಗೆ, ಕ್ಷೌರಕ್ಕೆ ಅಲ್ಪಸ್ವಲ್ಪ ವೆಚ್ಚವನ್ನಾದರೂ ಮಾಡಿದ್ದೆನೆಂದು ಧಾರಾಳ ಧೈರ್ಯದಿಂದ ಹೇಳಬಲ್ಲೆ—ಅಂದರೆ, ಅವರಲ್ಲಿ ಸ್ವಾರ್ಥ ಮತ್ತು ಲೋಭಗಳ ಕುರುಹುಗಳು ಒಡೆದು ಕಾಣುತ್ತಿದ್ದುವು. ಹಣವಿದ್ದವರ ಗತಿಯೇ ಹಾಗೆ—ಇಲ್ಲದ ಲೋಭವು ಅವರಲ್ಲಿ! ಲಕ್ಷ್ಮಿಯ ಗುಣವೇ ಅಂತಹುದು! ನನ್ನ ಬಡತನ, ತಂದೆತಾಯಿಗಳಿಲ್ಲದ ನನ್ನ ದುರವಸ್ಥೆ, ನಿರುದ್ಯೋಗದ ಸಮಯದಲ್ಲಿನ ನನ್ನ ಹಾಲ್‌ಹವಾಲೆ ಇವುಗಳ ಕುರಿತು ನಾನು ಕಿಶೋರರಿಗೆ ಹೇಳುತ್ತಿದ್ದೆನು. ನನ್ನ ಕುಟುಂಬದವರಾರೂ ಇಲ್ಲದಿರುವುದರಿಂದ ನಾನು ಆಫೀಸಿನ ಮಾಳಿಗೆಯಲ್ಲೇ ವಾಸಿಸುತ್ತಿದ್ದೆ. ಮೆನೇಜರರೂ ಅಪ್ಪಣೆಕೊಟ್ಟಿದ್ದರು. ಒಮ್ಮೊಮ್ಮೆ ಕಿಶೋರರೂ ಆಫೀಸಿಗೆ ರಾತ್ರಿ ಬಂದು ನನ್ನೊಡನೆ ಹೊತ್ತುಗಳೆಯುತ್ತಿದ್ದರು.

ದುರ್ದೈವವಶಾತ್ ರಿಟ್ರೆಂಚ್‌ಮೆಂಟಿನ ಕೊಡಲಿಯು ನಮ್ಮ ಆಫೀಸಿನ ತಲೆಗೂ ಬಿತ್ತು! ಸರಾಫರಾದ ಗೋಪಾಲ ಕಿಶೋರರೇ ಮೊದಲಾದ ಹನ್ನೆರಡು ಮಂದಿ ಗುಮಾಸ್ತರುಗಳಿಗೆ ಟೊಪ್ಪಿ ಬಿತ್ತು. ಮಾಡುವುದೇನು?

ಕಿಶೋರರು ಕೆಲಸದಿಂದ ಹೊರಹೋದುದೇ ನನಗೆ ಶನಿಹಿಡಿದಂತಾಯಿತು. ನನ್ನ ಶನಿಮಹಿಮೆಯನ್ನು ಏನೆಂದು ವರ್ಣಿಸಲಿ?

\+ \+ \+ \+ \+

"ರಂಗನಾಥ್! ನೀನು ಬಡವನೆಂದು ನನಗೆ ಗೊತ್ತು. ರಿಟ್ರೆಂಚ್‌ಮೆಂಟಿನಿಂದಾಗಿ ನಿನ್ನನ್ನು ಕೆಲಸದಿಂದ ತೆಗೆಯಬೇಕೆಂದು ಹೆಡ್ ಆಫೀಸಿನ ಓರ್ಡರು ಇತ್ತು. ಆದರೆ ನಿನ್ನ ಬದಲಿಗೆ ಗೋಪಾಲನನ್ನು ತೆಗೆದೆ. ನಿನ್ನ ಲೆಖ್ಖಪತ್ರಗಳಲ್ಲಿ ತುಂಬಾ ತಪ್ಪುಗಳಿವೆ! ಹತ್ತುಹನ್ನೆರಡು ದಿನಗಳಿಂದ ನಿನ್ನ ರೂಪ, ಕೆಲಸವೆಲ್ಲಾ ಪರ್ಯಟನ ಹೊಂದಿವೆ. ಈಗಲೂ ರಾತ್ರಿ ನಿದ್ದೆ ಇಲ್ಲವೇ?"

ನಾನು:—ಸರ್, ಮಲಗಿ ಸ್ವಲ್ಪ ಹೊತ್ತಾದೊಡನೆಯೇ ಆಫೀಸಿನ ಮಾಡಿಗೆ ಈಗಲೂ ಕಲ್ಲುಗಳು ಬೀಳುತ್ತಿವೆ. ಬಾಗಿಲು ತೆರೆಯಲ್ಪಟ್ಟಂತೆ ಭಾಸವಾಗುತ್ತದೆ. ನನ್ನ ಮಾಳಿಗೆಯ ಕಿಟಿಕಿ ಬಾಗಿಲುಗಳು ಹುಡಿಹುಡಿಯಾಗುತ್ತಿವೆ. ರಾತ್ರಿ ಇಡೀ ನಿದ್ದೆ ಬರಲಾರದು. ವಿಚಾರಿಸಿ ತಿಳಿದೆ—ಶೋಧಿಸಿದೆ—ನೆರೆಹೊರೆಯವರು ಅದೊಂದು ಕಲ್ಕುಟ್ಟಿ ಭೂತದ ಉಪದ್ರವವೆಂದು ಹೇಳುತ್ತಿರುವರು.

ಮೆನೇಜರ್: ಥೂ ಭೂತವಲ್ಲ! ಮೂಢನಂತಾಡಬೇಡ, ಹೋಗು. ಇದರ ವಿಷಯ ನಾನಾಲೋಚಿಸುವೆನು.

ಯಾವುದೋ ಕಲ್ಕುಟ್ಟಿಯಂತೆ—ಅದರ ಬಾಧೆಯಂತೆ—ನನ್ನ ಮಾಳಿಗೆಯ ಮಾಡು. ಕಿಟಿಕಿ ಬಾಗಿಲುಗಳು ಹುಡಿಹುಡಿ! ಹನ್ನೆರಡು ದಿನಗಳಾದುವು. ರಾತ್ರಿ 11 ಘಂಟೆ ದಾಟುತ್ತಲೇ ಕಲ್ಲುಗಳ ಸುರಿಮಳೆ. ಅದು ಕೂಡಾ ದೊಡ್ಡದೊಡ್ಡ ಕಲ್ಲುಗಳ ಎಸೆತ! ಯಾರೆಂದೆನ್ನಲಿ? ರಾತ್ರಿ ಹೊಂಚುಹಾಕಿ ನೋಡಿದೆ—ಯಾರೂ ಇಲ್ಲ. ಮನುಷ್ಯನಿಗೆ ಬೇಕಾದುದರಲ್ಲಿ ಮುಖ್ಯ ನಿದ್ರೆಯೊಂದು. ಅದು ಕೂಡಾ ಇಲ್ಲದಿದ್ದರೆ ಮರುದಿನ ಕೆಲಸವೋ ಮಣ್ಣೊ! ಎಲ್ಲಾ ಕಂಡಬಟ್ಟೆ! ಕುರ್ಚಿಯ ಮೇಲೆ ಕುಳಿತು ಮೇಜಿನ ಮೇಲೆ ತಲೆಯಿಟ್ಟು ಗಾಢ ನಿದ್ರೆ ತೆಗೆಯುವುದೇ ನನ್ನ ಕೆಲಸ!

ನನ್ನ ಅವಸ್ಥೆಯನ್ನು ಕಂಡು ಮಿ। ರೈಟರು ಒಂದು ದಿನ ನಾಲ್ವರು ಜವಾನರನ್ನು ಆಫೀಸಿನೊಳಗೆ ರಾತ್ರಿ ಕಾವಲಿರಿಸಿದನು. ರಾತ್ರಿ ೧೧॥ ಗಂಟೆ! ಕಗ್ಗತ್ತಲೆ!—ಕಲ್ಲುಗಳ ಜಡಿಮಳೆ ಬಿತ್ತು.

ಒಡನೆ ನಾವೈವರೂ ಹೊರಬಾಗಿಲಿನಿಂದಾಗಿ ಹಿತ್ತಲನ್ನು ಸೇರಿ ಒಂದು ಗೋಡೆಯ ಮೂಲೆಯಲ್ಲವಿತು ಕೂತೆವು. ನಾವು ಕೂತಿದ್ದ ಮೂಲೆಯ ಬಳಿಯೇ ಒಂದು ಪಾಯಿಖಾನೆ. ನಿಶ್ಶಬ್ಧವಾಗಿ ನಿಂತಿದ್ದೆವು.

ಪಾಯಿಖಾನೆಯ ಬಾಗಿಲು ಗರ್‍ರೆಂದಿತು. ನಾವು ಸ್ತಂಭೀಭೂತರಾದೆವು. ಯಾರೋ ಚಲಿಸಿದ—ಶಬ್ಧ!—ಆಲಿಸಿದೆವು. ಒಂದು ನಿಮಿಷದಲ್ಲಿ ಕಪ್ಪಗಿನ ಮುಸುಕು ಧಾರಣೆಯ ವ್ಯಕ್ತಿಯು ಫಕ್ಕನೆ ಹೊರಬಿತ್ತು. ಪುಣ್ಯವಶಾತ್ ನಮ್ಮನ್ನದು ಕಾಣಲಿಲ್ಲ. ಕಲ್ಲನ್ನು ಹೆಕ್ಕಿದಂತೆ ತೋರಿತು. ಸ್ವಲ್ಪ ಮುಂದರಿದು ಚೆಂಡೆಸದಂತೆ ಒಂದು, ಎರಡು, ಮೂರು ಎಸೆತ! ನನ್ನ ಮಾಳಿಗೆಯ ಮಾಡು ಢಂ! ಢಂ!! ಢಂ!!! ಎಂದಿತು. ಕಲ್ಲೆಸೆದ ಭೂತವಿದೆ!

ಪುನಃ ಪಾಯಿಖಾನೆಯನ್ನು ಹೊಕ್ಕಿತು. ಬಾಗಿಲನ್ನೆಳೆದುಕೊಂಡಿತು.

ನಮ್ಮೆದೆಯು ಧಡಧಡವೆನ್ನುತ್ತಿತ್ತು. ಭೂತವಲ್ಲವೆಂದು ನಮಗೆ ಖಚಿತವಾಯಿತಾದರೂ ಈ ವ್ಯಕ್ತಿಯನ್ನು ಹಿಡಿವ ಬಗೆಯೆಂತೆಂದು ನಮಗೆ ತೋರಲಾರದಾಯಿತು. ಕೊನೆಗೆ ನಾವು ಕೂತಲ್ಲಿಯೇ

ನಗೆ ಬಂದರೆ ನಕ್ಕು ಬಿಡಿ.

ಕಾಳನ ಕೋರಿಕೆ.*

ಲೇಖಕ:—ಆನಂದಕಂದ

ಕಾಳನು ಏಳೆಂಟು ವರುಷದ ಹುಡುಗ;
ಕಾಳಿಯ ಗುಡಿಗೊಂದು ದಿವಸ ಹೋದಾಗ—
ತೋಳೆತ್ತಿ ಕೈಮುಗಿದು ಕಣ್ಮುಚ್ಚಿ ನಿಂತು
ಕಾಳದೇವಿಗೆ ಬೇಡಿಕೊಂಡನು ಇಂತು:
"ಅಮ್ಮಮ್ಮಾ! ನಮ್ಮೂರು ಬಲು ದೊಡ್ಡದಮ್ಮಾ!
ನಮ್ಮೂರಲಿಹ ಜನ ಕಮ್ಮಿ ಇಲ್ಲಮ್ಮಾ!
ಎರಡು ಲಕ್ಷದ ಮೇಲೆ ಇನ್ನೆಷ್ಟೋ ಸಾವಿರ
ಇರುವರು ಎಂದು ನಾನರಿತಿಹೆನಮ್ಮಾ!
ದಿನ ದಿನ ಬೆಳಗು ಸಂಜೆಯಲಿ ಇವರಿಗೆಲ್ಲ
ಕುಡಿಯಲು ಬಿಸಿಬಿಸಿ ಕಾಫೀ ಬೇಕಮ್ಮಾ!
ಅವರೆಲ್ಲಾ ಕುಡಿಯುವ ಕಾಫಿಯ ಲೆಕ್ಕವ
ವಿವರಿಸಿ ಹೇಳುವೆ ಕೇಳು ನಮ್ಮಮ್ಮಾ!
ಅಬ್ಬಬ್ಬಾ! ತೀರ ಕಡಿಮೆಯಾಗಿ ಹಿಡಿದರು
ಒಬ್ಬೊಬ್ಬರಿಗೆ 'ಲೋಟ' ಎರಡು ಬೇಡೇನು?
ನಾಲ್ಕು 'ಲೋಟ'ಕೆ ತಂಬಿಗೆ ತುಂಬುವದು ಹದಿ-
ನಾಲ್ಕು ತಂಬಿಗೆಗೊಂದು ಕೊಡ ತುಂಬದೇನು?
ನೂರು ಮಂದಿಗೆ ನಾಲ್ಕು ಕೊಡವಾಗುವುದು ಹತ್ತು
ನೂರು ಮಂದಿಗೆ ನಾಲ್ಕುಹತ್ತು ಆಗುವುದು;
ಲಕ್ಷ ಮಂದಿಗೆ ನಾಲ್ಕುಸಾವಿರ ಕೊಡ ಕಾಫೀ,
ಲೆಕ್ಕವಾಯಿತೆ ನಮಗೆಷ್ಟು ಬೇಕೆಂದು?
ನಮ್ಮೂರ ಜನಕೆಂಟು ಸಾವಿರಕೂ ಹೆಚ್ಚು
ಕಮ್ಮನೆಯಾ ಕಾಫೀ ಕೊಡಗಳು ಬೇಕಮ್ಮಾ!
ಒಂದೊಂದೇ ದಿನಕಿಷ್ಟು ಕೊಡಗಳು ಬೇಕಿರೆ
ಒಂದು ವರುಷಕೆಷ್ಟು? ಲೆಕ್ಕ ನೋಡಮ್ಮಾ!
ಇಂದು ಈ ಲೆಕ್ಕವ ನಾ ಮಾಡಲಾರೆನು,
ಮುಂದಿನ ವರುಷಕೆ ಮಾಡಿ ಹೇಳುವೆನು.
ಇಂತಹ ಲೆಕ್ಕವ ಗುರುಗಳು ನಮಗಿನ್ನೂ
ಕಲಿಸಿಯೇ ಕೊಟ್ಟಿಲ್ಲ ಮಾಡಲಿನ್ನೇನು?
ಆದರು ನಾ ಸುಮಾರಾಗಿ ಹೇಳುವೆನು
ನಮ್ಮೂರ—ವರುಷದ—ಕಾಫೀ ಲೆಕ್ಕವನು;
ವರುಷದ ಕಾಫಿಯು ಸೇರಿ "ಕೆಂಪಾಂಬುದಿ-
ಕೆರೆ"ಯಂಥಾ ಕೆರೆ ತುಂಬುವುದು ತಿಳಿ ನೀನು.
ಕೆರೆ ತುಂಬಾ ಕಾಫಿಯು ಕಾಸ ಬೇಕಾದರೆ
ವರುಷವೆಲ್ಲವು ಎಷ್ಟು ಶ್ರಮ ನಮಗಮ್ಮಾ!
ಇರುವೆ ನೀ ಸುಮ್ಮನೆ ಕರುಣೆಯು ಬರದೇನೆ?
ಹರಿಸು ನಮ್ಮಗಳ ಈ ಕೊರತೆಯನಮ್ಮಾ!
ಇನ್ನೇನ ಬೇಡೆನು ನಿನ್ನನು ಕಾಡೆನು
ನನ್ನದಿದೊಂದೇ ಕೋರಿಕೆಯು ಕೇಳಮ್ಮಾ!
ಆಪತ್ತು ಬರದಂತೆ ನಮ್ಮೂರ ಜನಕೆಲ್ಲ
ಕಾಫೀಯ ಕೆರೆಯೊಂದ ಕೊಡು ನೀ ಕಾಳಮ್ಮಾ!
ದೋಸೆಯ ಬೆಟ್ಟವೊಂದಿದ್ದರು ಬೇಕು!"
ಇಲ್ಲದಿದ್ದರೆ ಕಾಫೀ ಕೆರೆಯೊಂದು ಸಾಕು.

*ಕಾಳನು ಬೆಂಗಳೂರಿನವನು.

ಮುದುಕಿ.

'ಅಂಬಿಕಾತನಯದತ್ತ.'

ನಾಡ ಸಂರಕ್ಷಣೆಗೆ ತೋಪು ಇರದಿರಲು
ನಾಡಿಗೊಂದಿರಬೇಕು ಬಯ್ಯುವಾ ಮುದುಕಿ;
ಊರ ಸಂರಕ್ಷಣೆಗೆ ನಾಯಿ ಇರದಿರಲು
ಊರಿಗೊಂದಿರಬೇಕು ಬಾಯ್ಬಡಕ ಮುದುಕಿ;
ಕೇರಿಯನ್ನೆಚ್ಚರಿಸೆ ಗಂಟೆಯಿರದಿರಲು
ಕೇರಿಗೊಂದಿರಬೇಕು ಕೆಮ್ಮುವಾ ಮುದುಕಿ;
ಮನೆಮನೆಗೆ—ಪ್ಲೇಗಾಗಿ—ದೀಪವಿರದಿರಲು
ಮನೆಗೊಂದು ಇರಬೇಕು ಸಾಯದಾ ಮುದುಕಿ!

—ಜ. ಕ.

ಪಿತೂರಿ ನಡೆಸಿದೆವು. ಪಾಯಿಖಾನೆಯ ಬಾಗಿಲನ್ನೆಳೆದುಕೊಂಡು ಬೊಬ್ಬಿಡುವುದು—ಎಂದು.

ಐವರೂ ಎದ್ದೆವು, ಮೆಲ್ಲ ಮೆಲ್ಲನೆ ಬಾಗಿಲ ಬಳಿ ಸೇರಿದ್ದಾಯಿತು. ಒಬ್ಬನು ಅದರ ಸಂಕೋಲೆಯನ್ನು ಶಬ್ಧವಿಲ್ಲದಂತೆ ಎತ್ತಿಕೊಂಡ. ಉಳಿದವರು ನಮ್ಮ ಕೈಯಲ್ಲಿನ ಹತ್ಯಾರುಗಳನ್ನು ಗಟ್ಟಿಯಾಗಿ ಹಿಡಿದುಕೊಂಡೆವು. . . . ಬಾಗಿಲು ಢಮ್ಮನೆ ಎಳೆಯಲ್ಪಟ್ಟಿತು. ಕಪ್ಪಗಿನ ವ್ಯಕ್ತಿಯು ಒಳಗೆ! ಗಡಿಬಿಡಿಯಾಗಲಿಲ್ಲ. ಸಂಕೋಲೆಯು ಬಿತ್ತು. ಪಾಯಿಖಾನೆಯು ನಾಲ್ಕು ಸುತ್ತಲಿಂದಲೂ ಮುಚ್ಚಿರುವುದರಿಂದ ಒಳಗಿನವನು ಓಡಲಾರದಾದನು.

ನಾವು ಬೊಬ್ಬಿಟ್ಟೆವು. ನೆರೆಹೊರೆಯವರನ್ನೆಬ್ಬಿಸಿದೆವು. ಕಾಲು ಘಂಟೆ ದಾಟಲಿಲ್ಲ. ನೂರು ಮಂದಿಗಳಿಗಿಂತಲೂ ಹೆಚ್ಚಿನವರು ನಮ್ಮ ಬಳಿ ಸೇರಿದರು. ಕೆಲವರೆಂದರು—ಬಾಗಿಲನ್ನು ಬೆಳಿಗ್ಗೆ ತೆರೆಯಬಹುದೆಂದು. ಕೆಲವರೆಂದರು—ಈಗಲೇ ತೆರೆಯಬೇಕೆಂದು. ಕೆಲವರೆಂದರು ಒಳಗೆ ಯಾರಿಲ್ಲ. ಬಾಗಿಲ ಸಂಧಿನಲ್ಲಿ ಕಾಣುವುದೂ ಇಲ್ಲ. ಒಳಗಿದ್ದಂತೆ ಶಬ್ದವೂ ಇಲ್ಲ, ಇರುತ್ತಿದ್ದರೆ ಬೊಬ್ಬಿಡುತ್ತಿದ್ದಿಲ್ಲವೇ? ಎಂದು.

ಸಾವಿರಗಟ್ಟಳೆ ಜನರು ಬೆಳಿಗ್ಗೆ ಪಾಯಿಖಾನೆಯ ಬಳಿ! ಪೋಲೀಸರೂ ಬಂದಿದ್ದರು. ಬಂದೂಕನ್ನೂ ತಂದಿದ್ದರು. ಒಬ್ಬನು ಮಾಡಿಗೆ ಹತ್ತಿದ "ಕಪ್ಪಗಿನ ಮುಸುಕಿನವ ಮೂಲೆಯಲ್ಲಿ ಕುಳಿತಿದ್ದಾನೆ!!!" ಎಂದ. ಸಂಕೋಲೆಯು ತೆಗೆಯಲ್ಪಟ್ಟಿತು. ಬಾಗಿಲು ದೂಡಲ್ಪಟ್ಟಿತು. ಹಿಡಿದರು!

ಕೋರ್ಟಿನಲ್ಲಿ ವಿಚಾರಣೆ ನಡೆಯಿತು. 'ನನ್ನ ಹೆಸರು ಗೋಪಾಲ ಕಿಶೋರನೆಂದು. ರಂಗನಾಥನ ಉದ್ಯೋಗ ಸಂಪಾದನೆಗಾಗಿ, ನನ್ನನ್ನು ಕೆಲಸದಿಂದ ತೆಗೆದುದಕ್ಕಾಗಿ, ನಾನು ಹೀಗೆ ಮಾಡಿದೆ' ಎಂದು 'ಬಂಧು'ವಿನ ನಿವೇದನೆ.

12 ಚಡಿಗಳೂ **12** ತಿಂಗಳ ಕಾರಾಗ್ರವಾಸವೂ ದೊರೆಯಿತು 'ಬಂಧುವಿ'ಗೆ.

ಧ್ಯಾನ !

ಲೇ: ಶ್ರೀ। ಮಿಜಾರ ಪದ್ಮನಾಭ ಭಂಡಾರಿ.

ಮನಸ್ಸು ಸತ್ವ, ರಜೋ, ತಮ ಗುಣಗಳಿಂದೊಳಗೊಂಡಿರುತ್ತದೆ. ಅದು ಕೆಲವು ವೇಳೆ ಸಾತ್ವಿಕ ಗುಣದಿಂದಲೂ, ಕೆಲವು ವೇಳೆ ರಜೋ ಗುಣದಿಂದಲೂ, ಇನ್ನೂ ಕೆಲವು ವೇಳೆ ತಮೋಗುಣದಿಂದಲೂ ಕೂಡಲ್ಪಡುತ್ತದೆ. ಸತ್ವ ಗುಣದಿಂದೊಳಗೊಂಡಿರುವಾಗ ಮನಸ್ಸು ಮನುಷ್ಯನನ್ನು ಸಾತ್ವಿಕ ವಿಚಾರಗಳಲ್ಲಿಯೇ ತಲ್ಲೀನಗೊಳಿಸುತ್ತದೆ. ಪರರು ತನಗೆ ಅನ್ಯಾಯವನ್ನು ಮಾಡಿದಾಗಲೂ ಆತನು ಅದನ್ನು ಹಿತವೆಂದೇ ಭಾವಿಸುತ್ತಾನೆ. ರಜೋಗುಣವು ಮನುಷ್ಯನನ್ನು ನ್ಯಾಯಾನ್ಯಾಯ ವಿಚಾರಗಳಲ್ಲಿ ತಲೆಹಾಕುವಂತೆ ಪ್ರೇರೇಪಿಸುತ್ತದೆ. ಆತನು ಲೋಕದ ನ್ಯಾಯನ್ಯಾಯಗಳಲ್ಲಿ ಮನಸ್ಸುಹಾಕಿ 'ದುಷ್ಟಶಿಕ್ಷಣ ಶಿಷ್ಟಪರಿಪಾಲನೆ'ಯನ್ನು ಮಾಡುವುದರಲ್ಲಿ ತನ್ನ ದೇಹವನ್ನೆ ವ್ಯಯಿಸುವುದಕ್ಕೆ ಹಿಮ್ಮೆಟ್ಟುವುದಿಲ್ಲ. ಹೀಗೆ ರಜೋಗುಣದಿಂದ ಕೂಡಿದವರೆ ರಾಜರಾಗುವುದಕ್ಕೆ ಯೋಗ್ಯರಾದವರಲ್ಲದೆ ಅನ್ಯರು ಸಲ್ಲರು. ಇನ್ನು ತಮೋಗುಣದವರು ಅನ್ಯರನ್ನು ಸಿಂದಿಸುವುದಕ್ಕೂ ಪೀಡಿಸುವುದಕ್ಕೂ ಇರತಕ್ಕವರು. ಅನ್ಯರಿಗೆ ಅಹಿತವಾದುದು ಅವರಿಗೆ ಹಿತ. ಅನ್ಯರ ಆಟವು ಅವರಿಗೆ ಮಾಟ.

ಮನುಷ್ಯನ ಮನಸ್ಸು ಸದಾ ಒಂದೇ ಗುಣದಿಂದ ಕೂಡಿಕೊಂಡಿರುವುದಿಲ್ಲ. ಅದು ನಿಮಿಷಮಾತ್ರದಲ್ಲಿ ಒಂದು ಗುಣದಿಂದ ಇನ್ನೊಂದು ಗುಣಕ್ಕೆ ದುಮುಕುತ್ತದೆ. ಆಯಾ ಗುಣವು ತನ್ನನ್ನು ಸೇರುವಾಗ ಆ ಗುಣಪ್ರಮಾಣವಾಗಿ ಅದು ವರ್ತಿಸುತ್ತದೆ. ಯಾವ ಗುಣವು ಒಬ್ಬನಲ್ಲಿ ಹೆಚ್ಚು ಕಾಲದ ತನಕ ನಾಟಿಕೊಂಡಿರುತ್ತದೆಯೋ ಆ ಗುಣದಿಂದಲೇ ಆತನು 'ಒಳ್ಳೆಯವನು, ಕೆಟ್ಟವನು' ಎಂದು ಆತನ ಗುಣಕಥನವನ್ನು ಜನತೆಯು ಮಾಡುವುದು. ಒಂದು ದೀಪಕ್ಕೆ ಹಳದಿ ಗಾಜಿನ ಬುರುಡೆಯನ್ನಿಟ್ಟರೆ ಹಳದಿ ಪ್ರಕಾಶವನ್ನೂ, ನೀಲ ಗಾಜಿನ ಬುರುಡೆಯನ್ನಿಟ್ಟರೆ ನೀಲ ಪ್ರಕಾಶವನ್ನೂ ಕೊಡುವಂತೆ, ಮನಸ್ಸು ಆಯಾ ಗುಣಕ್ಕನುಸಾರವಾಗಿ ವರ್ತಿಸುತ್ತದೆ. ಬಣ್ಣವಿಲ್ಲದ ಬುರುಡೆಯನ್ನಿಟ್ಟರೆ ದೀಪವು ಯಾವ ರೀತಿಯಲ್ಲಿ ಶುಭ್ರವಾದ ಪ್ರಕಾಶವನ್ನು ಹೊರಸೂಸುವುದೋ ಆ ರೀತಿಯಲ್ಲಿ ನಿಗುರ್ಣದಿಂದೊಳಗೊಂಡಿರುವ ಮನಸ್ಸು ಶುಭ್ರವಾದ ಜ್ಞಾನಪ್ರಕಾಶವನ್ನು ಹೊರಹೊಮ್ಮಿಸುತ್ತದೆ. ಈ ಜ್ಞಾನಪ್ರಕಾಶಕ್ಕಾಗಿ ಮನುಷ್ಯನು ಸದಾ ಹಸಿವುತ್ತಿರಬೇಕು. ಇದರಿಂದ ಮುಂದೆ ಆತನು ಜ್ಞಾನಾರ್ಜನೆಯನ್ನು ಮಾಡಿ ಶಿವಸಾನ್ನಿಧ್ಯವನ್ನು ಹೊಂದುವನು.

ಪ್ರತಿಯೊಬ್ಬನೂ ಪರಮಾತ್ಮನನ್ನು ಹೊಂದಲಿಕ್ಕೇ ಬೇಕು. ಅವನು ಹಲವು ಜನ್ಮಗಳನ್ನು ದಾಟುತ್ತಾ ಕಷ್ಟಸುಖಗಳ ಅನುಭವಗಳನ್ನು ಸಂಗ್ರಹಿಸಿ ಸಾಧನೆಯಿಂದ ತನ್ನಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನಿಸಿ ಅದರಲ್ಲಿ ಅಭಿವೃದ್ಧಿಯನ್ನು ಹೊಂದಿ ಪರಮಾತ್ಮನನ್ನು ಸೇರುವನು. ನಮ್ಮಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಸಾಧನೆಯೇ ಅತ್ಯಗತ್ಯ. ಆ ಸಾಧನೆಯು ಕೇವಲ ಪ್ರೇಮಪೂರಿತವಾದುದೆ ಆಗಬೇಕಲ್ಲದೆ ಬೇರೆಯಲ್ಲ. ಅಂತಹ ಸಾಧನೆಯು ಪಾರಮಾರ್ಥಿಕ ಹಾದಿಯಲ್ಲಿ ನಮ್ಮನ್ನು ಮುಂದೊತ್ತುತ್ತದೆ. ಈ ತರದ ಪ್ರೇಮಸಾಧನೆಯನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು? ಪರಮಾತ್ಮನು ತ್ರಿಗುಣಾತ್ಮಕನೆಂದೂ ಆತನನ್ನು ಕೂಡುವುದಕ್ಕೆ ನಾವು ತ್ರಿಗುಣಾತ್ಮಕರಾಗಬೇಕೆಂದೂ ಮೊತ್ತಮೊದಲು ತಿಳಿದುಕೊಳ್ಳಬೇಕು. ಪರಮಾತ್ಮನೆಂಬ ತಟಾಕದ ಜಲವನ್ನು ಸೇರಬೇಕಾದವನು ತಮ, ರಜ ಮತ್ತು ಸತ್ವ ಎಂಬ ಮೂರು ಸೋಪಾನಗಳನ್ನು ಕ್ರಮವಾಗಿ ಇಳಿದು ಹೋಗಬೇಕು. ಆ ಜಲವನ್ನು ಸೇರುವ ಮುಂಚೆ ಸಾತ್ವಿಕ-ಮೆಟ್ಟಲೆಡೆಗೆ ಮೊದಲಾಗಿ ಬರಬೇಕು. ಅನಂತರ ಮಾತ್ರ ನಾವು ಆ ಜಲದಲ್ಲಿ ಮೂಡಿ ಮುಳುಗಬಹುದು. ಆದುದರಿಂದ ಮನಸ್ಸು ಸಾತ್ವಿಕ ಸೋಪಾನದಲ್ಲಿರುವಂತೆ ನಾವು ಆ ಪ್ರೇಮಬಂಧಕ ಸಾಧನೆಯನ್ನು ಉಪಯೋಗಿಸಬೇಕು. ಇಂತಹ ಸಾತ್ವಿಕ ವಿಚಾರವನ್ನು ಕೊಡುವುದು ಆ ಚಿದಾನಂದನ ಧ್ಯಾನವೊಂದಲ್ಲದೆ ಬೇರೆಯಲ್ಲ. ಅದು ಸರ್ವಲೋಕ ವ್ಯವಹಾರಗಳಿಂದಲೂ ನಮ್ಮನ್ನು ದೂರದಲ್ಲಿರಿಸಿ ಪರಮಾತ್ಮನ ಪ್ರಕಾಶ ಕಿರಣಗಳನ್ನು ನಮ್ಮೆಡೆಗೆ ಸೂಸುತ್ತದೆ. ಸೂಕ್ಷ್ಮರೂಪಿಯೂ, ಪ್ರೇಮರೂಪಿಯೂ ಸತ್ಯರೂಪಿಯೂ ಆಗಿರುವ ಪರಮಾತ್ಮನನ್ನು ನಮ್ಮ ಅಂತರಂಗದಲ್ಲಿಯೇ ಕಾಣಬಹುದು. ಇದರಿಂದ ನಾವು ಸದಾ ಪರಮಾತ್ಮನ ಧ್ಯಾನನಿರತರಾಗಬೇಕು. ಆತನ ಧ್ಯಾನಕ್ಕೆ ಇಂತಹದೆ ನಾಮವಾಗಬೇಕೆಂದಿಲ್ಲ. ಯಾವ ನಾಮದಿಂದ ನಮ್ಮ ಮನಸ್ಸನ್ನು ಪರಮಾತ್ಮನಲ್ಲಿ ಇರಿಸಬಹುದೆಂದು ನಾವು ಭಾವಿಸುವೆವೋ ಆ ನಾಮದಿಂದಲೇ ಆತನನ್ನು ಭಜಿಸಬಹುದು. ಆ ಭಜನೆಯಲ್ಲಿ ಏಕಾಗ್ರತೆಯೂ ಆಶಾರಾಹಿತ್ಯವೂ ಇರಬೇಕು. ಅನಂತರ ಮುಂದಿರುವುದೆ ಆ ಬ್ರಾಹ್ಮಿಕ ಸ್ಥಾನ. ಆಗ ಮಾತ್ರ ಕ್ಷೀರದಲ್ಲಿ ಕಲೆತು ಹೋದ ಸಕ್ಕರೆಯು ಕ್ಷೀರದ ಸವಿಯಲ್ಲಿಯೆ ಕಲೆತುಹೋಗುವಂತೆ ಮನುಷ್ಯನು ಪರಮಾತ್ಮನಲ್ಲಿ ಐಕ್ಯ ಹೊಂದುವನು.

ಆದುದರಿಂದ ಧ್ಯಾನವು ಅತ್ಯಗತ್ಯ.

ಮನುಷ್ಯನು ಹಾರಾಡಬಹುದು!

ಎಲ್ಲಾ ಫೇಶನ್ ಬರುವುದು ಪೇರಿಸಿನಿಂದ! ಆದರೆ ಇದೊಂದು ಫ್ಲಯಿಂಗ್ ಫೆಶನ್ ಫ್ರಾನ್ಸಿಸಿಂದ ಬಂದಿದೆ. ಇದೂ ಪೇರಿಸಿನಿಂದ ಬಂದಿದ್ದರೆ ಒಳ್ಳೇದಿತ್ತು. ಅಲ್ಲಿಯ Aeronautical Research ಎಂಬ ಗಾಳಿ ಶೋಧನೆಯ ಮುಖ್ಯಾಧಿಕಾರಿಯೊಬ್ಬನು ಕಳೆದ ೩೦ ವರ್ಷಗಳಿಂದಲೂ ಪಕ್ಷಿಗಳ ಹಾರಾಟದ ಮೇಲೆಯೇ ಕಣ್ಣಿಟ್ಟವನಂತೆ! ಈಗ ಹೇಳುತ್ತಾನೆ 'ಬರೇ ಮೂರೇ ಮೂರು ವರ್ಷಗಳೊಳಗೆ ನನ್ನದೊಂದು ಶೋಧನೆಯಿಂದಾಗಿ ಒಂದು ತುಂಡು ವಸ್ತ್ರ, ಒಂದು ಯಂತ್ರ, ಒಂದು ತುಂಡು ಮರಗಳ ಸಹಾಯದಿಂದ ಪ್ರತಿಯೊಬ್ಬನನ್ನೂ ತಾನು ಹಕ್ಕಿಯಂತೆ ಹಾರಿಸುವೆನೆ'ಂದು. ಒಂದು ಸೀಟು—ಇದರ ಮೇಲೆ ಕೂತು ಅದರ ಎರಡು ಪಕ್ಕಗಳ ರೆಕ್ಕೆಗಳಿಗೆ ಸಂಬಂಧಪಟ್ಟ ಪೆಡ್ಲುಗಳನ್ನು ಕಾಲಿಂದೊತ್ತುವುದು. ಹಾರುವುದು.

The slave-owner is always more hurt than the slave.—*Gandhi.*

ಬಡವರ ಯಮ.

ಲೇಖಕರು:-ಶ್ರೀ ಎನ್. ಎಸ್. ಬೋಳೂರ್. ಮಂಗಳೂರು.

ರಾಮುಪ್ಪನು ಬೋಳೂರಿನಲ್ಲಿ ತನ್ನ ಸಣ್ಣ ಸಂಸಾರದೊಡನೆ ವಾಸಿಸುತ್ತಿದ್ದ. ಬಡತನದ ಬಂಧವೆಂಬುದು ಅವನನ್ನು ನಾಲ್ಕು ಕಡೆಗಳಲ್ಲೂ ಕಟ್ಟಿತ್ತು. ಆದರೂ ಆ ಕಟ್ಟಿನೊಳಗೂ ಒಂದು ಸಂಸಾರದ ಯಾತ್ರೆಯು ಮುಂಸಾಗುತ್ತಿತ್ತು.

ರಾಮುಪ್ಪನಿಗೆ ತಿಂಗಳಿಗೆ ಹತ್ತು ರೂಪಾಯಿ ಎಂಟಾಣೆ ಸಂಬಳ. ಅದೊಂದು ಹಂಚಿನ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ. ಬೆಳಿಗ್ಗೆ ಆರುವರೆ ಘಂಟೆಗೆ ಕಾರ್ಖಾನೆಗೆ ಹೋದರೆ ರಾತ್ರಿ ಒಂಭತ್ತು ಘಂಟೆಗೆ ಮನೆಯಂಗಳವನ್ನು ಹೇಗೂ ಸೇರುತ್ತಿದ್ದ.

ಹೆಸರಿಗೆ ಮಾತ್ರ ಅವನಿಗೆ ಹತ್ತುವರೆ ರೂಪಾಯಿ ಸಂಬಳ. ಆದರೆ ಅವನೊಡನೆ ಮನೆಗೆ ಬರುತ್ತಿದ್ದುದು ಒಮ್ಮೊಮ್ಮೆ ನಾಲ್ಕು ದುಡ್ಡು, ಒಮ್ಮೊಮ್ಮೆ ಹತ್ತು ಹನ್ನೊಂದು ಪೈ!-ಎಂದಾಗ ಮಿಕ್ಕುಳಿದ ಹಣದ ಸದ್ವಿನಿಯೋಗವಾಗುತ್ತಿತ್ತೆಂದಲ್ಲ-ದುರ್ವಿನಿಯೋಗವಾಗುತ್ತಿತ್ತು. ಕೆಲಸದ ಬೇಸರವನ್ನು ಕಳೆಯುವುದಕ್ಕಾಗಿ ದಿನಂಪ್ರತಿ ಹೆಂಡದಂಗಡಿಯನ್ನು ಸೇರದಿರುತ್ತಿದ್ದಿಲ್ಲ-ಬಡವನಲ್ಲವೇ? ಬದುಕಿನಲ್ಲಿ ಬೇರೇನು ಆಶೆಯಿದೆ? ಸುಖವಿದೆ!

ರಾಮುಪ್ಪನ ಹೆಂಡತಿ ಕಲ್ಯಾಣಿ ಕೂಡಾ ಅದೇ ಕಾರ್ಖಾನೆಯಲ್ಲೇ ಕೆಲಸಮಾಡುತ್ತಿದ್ದಳು. ಆವೆಮಣ್ಣು ಹೊರುವುದು, ಕಸ ಗುಡಿಸುವುದು, ಕಟ್ಟಿಗೆ ತರುವುದು ಇದು ಅವಳ ಕೆಲಸ. ಅವಳಿಗೂ ಏಳು ರೂಪಾಯಿ ಸಿಗುತ್ತಿತ್ತು. ತನಗೂ ತನ್ನ ಗಂಡನಿಗೂ, ಇಬ್ಬರು ಹಸುಕೂಸುಗಳಿಗೂ 'ದಿನದ ಪಡಿ'ಯು ಹೇಗೋ ಹಾಗೆ ಸಿಗುತ್ತಿತ್ತು.

ಅದೊಂದು ತಿಂಗಳ ಕೊನೆಯ ದಿನ. ರಾಮುಪ್ಪನಿಗೂ ಕಲ್ಯಾಣಿಗೂ ತಲಬು ಸಿಕ್ಕಿತು. ಆರು ಘಂಟೆಯಾದೊಡನೆ ಕಲ್ಯಾಣಿಯು ಮನೆಯತ್ತ ಕಡೆ ನಡೆದಳು. ಏಳು ರೂಪಾಯಿಯ ಅಕ್ಕಿ ಸಂಬಾರ ಜೀನಸುಗಳನ್ನು ಪಡೆದು ರಾತ್ರಿ ಗಂಜಿ ಬೇಯಿಸಿಟ್ಟಳು. ಒಳ್ಳೆಯ ಪದಾರ್ಥಗಳನ್ನೂ ಮಾಡಿಟ್ಟಳು.

ರಾತ್ರಿ ಒಂಭತ್ತು ಘಂಟೆಯ ನಂತರ ರಾಮುಪ್ಪನು ಮನೆಗೆ ಬಂದ. ಸೇಂದಿಯಿಂದ ಬಟ್ಟೆಬರೆಗಳು ತೊಯಿದು ಹೋಗಿದ್ದುವು. ರಾಮುಪ್ಪನ ಕಿಶೆಯಲ್ಲಿ ಸಂಬಳದ ಅರ್ಧಾಂಶವಾದರೂ ಇದ್ದೀತೆಂದು ಕಲ್ಯಾಣಿಯ ಭರವಸೆ. ಜೇಬಿಗೆ ಕೈಯಿಟ್ಟಳು-ಹತ್ತು ಪೈಯಿದೆ. ರಾಮುಪ್ಪ ಹೇಳುತ್ತಾನೆ "ಏನೇ ರಂಡೇ೯-ಕೀ-ಶೆ-ಗೆ ಕೈ ಹಾಕುತ್ತೀ" ಅಮಲಿನಿಂದ ಲೋಕವೇ ಮರೆತುಹೋಗಿದೆ. ಪಾಪ!

ಹೀಗೆ ಅನೇಕ ತಿಂಗಳುಗಳು ದಾಟಿದುವು.

\+ + + + +

ಕಲ್ಯಾಣಿಯು ಹಾಸಿಗೆ ಹಿಡಿದಿದ್ದಾಳೆ. ಸನ್ನಿಪಾತ ಜ್ವರ. ರಾತ್ರಿ ಎಂಟು ಘಂಟೆಯಾಗಿದೆ. ಮಕ್ಕಳೆರಡೂ ಅವಳ ಬಳಿ ಮಲಗಿವೆ.

\+ + + + +

ಮೂವತ್ತನೇ ತಾರೀಕಾದುದರಿಂದ ರಾಮುಪ್ಪನಿಗೆ ಸಂಬಳವು ದೊರೆಯಿತು. ಇನ್ನು ಮೇಲೆ ಹೆಂಡ ಕುಡಿಯೆನೆಂದು ದೃಢೀಕರಿಸಿದ್ದ ರಾಮುಪ್ಪನು ಹಣವನ್ನು ಹಿಡಿದುಕೊಂಡು, ಪತ್ನಿಯ ಸ್ಥಿತಿಯನ್ನು ಸ್ಮರಿಸುತ್ತಾ ದಾರಿ ನಡೆಯುತ್ತಿದ್ದನು. ಮೆಲ್ಲನೆ ಹಿಂತಿರುಗಿ ನೋಡಿದನು. ಜತೆಗಾರರಲ್ಲಿ ಕೆಲವರು ಹೆಂಡದಂಗಡಿಯನ್ನು ಹೊಗುತ್ತಿದ್ದಾರೆ. ಮನಸ್ಸಿನ ದೃಢತೆಯ ಭಾವವು ಹೊರಹೊಳೆಯಲು "ಥೂ! ಹಾಳು ಹೆಂಡ" ಎಂದು ಧಿಕ್ಕರಿಸಿ ಎರಡು ಹೆಜ್ಜೆ, ನಾಲ್ಕು ಹೆಜ್ಜೆ, ಇಪ್ಪತ್ತು ಹೆಜ್ಜೆ ಮುಂದೆ ನಡೆದನು. ಮಗದೊಮ್ಮೆ ಹಿಂದೆ ನೋಡಿದ. ಹೆಂಡದ ಸುಖವು ಮನಸ್ಸಿನಲ್ಲಿ ಮೂಡುತ್ತಿದೆ. ಅಂಗಿಯ ಜೇಬಿಗೆ ಕೈಯಿಟ್ಟ. ಸಾಲ ಕೊಟ್ಟುಳಿದ ಐದು ರೂಪಾಯಿ ಇದೆ. "ಬಹಳ ಹೆಚ್ಚು, ಇಷ್ಟರಲ್ಲಿ ನಾಲ್ಕಾಣೆ ತೆಗೆವೆ" ಎಂದು ಭಾವಿಸಿದ. ಮರುಕ್ಷಣ ಸುರನಿಲಯವನ್ನು ಸೇರಿಯೇ ಸೇರಿದ. ಕುಡಿದು, ಕೂಡಲೇ ಮನೆಗೆ ತಿರುಗುವೆ ಎಂದು ಯೋಚಿಸಿದ.

ಸುರೆಯನ್ನು ತುಟಿಗೆತ್ತಿ ಹಿಡಿದು ಕುಡಿಯಲಿದ್ದ—ಅವನಿಗೆ ಸತಿಯ ದುರವಸ್ಥೆಯ ನೆನಪಾಯಿತು. ಬಡಮಕ್ಕಳ ಪ್ರತಿಬಿಂಬವು ಅವನೆದುರು ನಿಂತಿತು. ಕೈಯಲ್ಲಿದ್ದ ಗ್ಲಾಸು ತಟ್ಟನೆ ಕೆಳಗೆ ಬಿತ್ತು. ನಷ್ಟದ ಮೇಲೊಂದು ನಷ್ಟ! ಬಡವರಿಗೆ ದೇವರೇ ಗತಿಯೆಂದು ಇಷ್ಟು ದಿನ ಕುಡಿಯದಷ್ಟು ಕುಡಿದ. ಗ್ಲಾಸಿನ ಕ್ರಯವನ್ನೂ ಹೆಂಡದ ಕ್ರಯವನ್ನೂ ಕೊಟ್ಟ. ಹೊರಬಿದ್ದ. ಅರ್ಧ ದಾರಿಯಲ್ಲೇ ಒಬ್ಬನು ಓಡಿಬಂದು "ಇನ್ನೂ ಒಂದು ರೂಪಾಯಿ ಆಗಬೇಕು. ಎರಡು ಗ್ಲಾಸಿನಲ್ಲಿ ಕೊಟ್ಟುದು ಸರಾಯಿ. ಸೇಂದಿಯಲ್ಲ! ಅರ್ಧ ಕ್ರಯ ಬರಬೇಕು" ಎಂದು ಗದರಿಸಿದ. ಹೆಂಡದೊಂದಿಗೆ ಶರಾಯಿ ಕುಡಿದ ಅಮಲು ರಾಮುಪ್ಪನಿಗೆ. ಲೋಕವೇ ಕಾಣದು. ಒಬ್ಬನಿಗೆ ಇಬ್ಬರಂತೆ, ಒಂದು ಬೆಳಕಿಗೆ ಹತ್ತು ಬೆಳಕು ರಾಶಿಯಂತೆ ಕಾಣುತ್ತಿತ್ತು. ಒಂದು ಭಾವನೆಗೆ ಅಷ್ಟಿಷ್ಟು ಭಾವನೆಯಂತೆ, ಒಂದು ಮಾತಿಗೆ ಐವತ್ತು ಮಾತಿನಂತೆ ಹೊರಬಿತ್ತು. ಒಂದು ನಡೆಗೆ ಹದಿನೈದು ನಡೆ, ಒಂದು ಹೆಜ್ಜೆಗೆ ಎರಡು ಹೆಜ್ಜೆಯಂತಾದುವು.

ಇಂತಹ ಮಾರ್ಪಾಟನ್ನು ಹೊಂದಿ ರಾಮುಪ್ಪನು ಗದ್ದೆಯ ಕಾಲ್ದಾರಿಯನ್ನು ದಾಟುತ್ತಿದ್ದ. ಗದ್ದೆಯ ಬಳಿಯಿದ್ದ ಅದೊಂದು ದೊಡ್ಡ ತೋಡಿನ ಬಳಿ ಬರುತ್ತಲೇ ಅವನಿಗೆ ವಿದ್ಯುತ್ ಪ್ರವಾಹವಾದಂತಾಯಿತು. ೬೦ ಅಡಿಗಳ ಕೆಳಗಿನ ಬಂಡೆಕಲ್ಲುಗಳ ಮೇಲೆ ಕಾಲ್ತಪ್ಪಿ ಬಿದ್ದ! ಉಳಿಗಾಲವೆಲ್ಲಿ?

ಹನ್ನೆರಡು ದಿನಗಳಾದುವು. ರಾಮುಪ್ಪನ ಸುದ್ದಿಯೇ ಇಲ್ಲ. ಮನೆಯಲ್ಲಿ ಪೈಯಿಲ್ಲದ ದುಃಖದಿಂದಲೋ, ಸಾಲ ಮಾಡಿ ಮಾಡಿ ವ್ಯಸನಪಟ್ಟೋ, ಅಸ್ವಸ್ಥದ ಬಿರುಸಾಟದಿಂದಲೋ ಕಲ್ಯಾಣಿಯು ಸಂಪೂರ್ಣ ನಿಶ್ಯಕ್ತಳಾಗಿ ಮೃತ್ಯುಶಯ್ಯೆಯಲ್ಲಿ ಬಿದ್ದಿದ್ದಳು. ಈಗಲೋ ಮತ್ತೋ ಪ್ರಾಣವು ಹಾರಲಿರುತ್ತಿದೆಯೆಂದಿರುವಾಗ ನೆರೆಹೊರೆಯ ಕೃಷ್ಣಮ್ಮಳು ಬಂದು 'ಕಲ್ಯಾಣಿ ಗಂಡನ ಆಶೆ ಬಿಡು! **ಬಡವರ ಯಮನು** ಅವನನ್ನೊಯ್ದ. ಗದ್ದೆತೋಡಿನಲ್ಲಿ ಬಿದ್ದ ಶವವನ್ನು ತೋಟಿಗಳು ತೆಗೆದಿದ್ದಾರೆ" ಎಂದಳು.-ಕೇಳಿ ಕಲ್ಯಾಣಿಯುಳಿಯಲಿಲ್ಲ. ಗಂಡನನ್ನು ತಾನೂ ಸೇರಿದಳು.

ಅತ್ಯುತ್ಕೃಷ್ಟ ! ಅತ್ಯುತ್ತಮ !

ಕಾಮಿನಿಯಾ ಟೊಯ್ಲೆಟ್ ಸೋಪ್

ಅದನ್ನು ಉಪಯೋಗಿಸಿದವರಿಗೆ ಅದರ ಪ್ರಾಶಸ್ತ್ಯಯೂ,
ಪ್ರಯೋಜನವೂ ತಿಳಿದುಬಾರದಿರದು

ಉತ್ತಮ ತರಗತಿಯ ಬಹು ಬಗೆಯ ಕಾಮಿನಿಯಾ ಸೋಪುಗಳನ್ನೇ ಉಪಯೋಗಿಸಿರಿ!

ಕಾಮಿನಿಯಾ ವೈಟ್‌ರೋಸ್ ಸಾಬೂನು, ಕಾಮಿನಿಯಾ ಸೇಂಡಲ್ ಸಾಬೂನು, ಕಾಮಿನಿಯಾ ಟ್ರಾನ್ಸ್‌ಪೇರೆಂಟ್, ಗ್ಲಿಸಿರಿನ್ ಸಾಬೂನು, ಕಾಮಿನಿಯಾ ಲವೆಂಡರ್ ಸಾಬೂನು, ದಿಲ್‌ಬಾರ್ ಸಾಬೂನು.

ಈ ಮೇಲಿನ ಎಲ್ಲಾ ಸಾಬೂನುಗಳು ಬಹಳ ಪರಿಮಳಭರಿತವಾಗಿದ್ದು ಉಪಯೋಗಿಸುವಾಗ ಮನಾಹ್ಲಾದವನ್ನುಂಟುಮಾಡುತ್ತದೆ

ಕಾಮಿನಿಯಾ ಸಾಬೂನನ್ನೇ ಉಪಯೋಗಿಸಿರಿ!

ಅದನ್ನು ಅಂಗಡಿಯಿಂದ ಪಡೆಯುವಾಗ ಅದರ ಗುಣ ಮತ್ತು ಶುದ್ಧತೆಯ ಚಿಹ್ನೆಯಾದ "ಕಾಮಿನಿಯಾ" ಎಂಬುದಿದೆಯೋ ನೋಡಿರಿ.

3 ತುಂಡುಗಳಿರುವ ಪೆಟ್ಟಿಗೆಗೆ

ರೂಪಾಯಿ 1-0-0. ವಿ. ಪಿ. ಖರ್ಚು ಪತ್ಯೇಕ.

ಮಂಗಳೂರು ಏಜಂಟರು– ದಿ ಷಹಾ ಕಂಪೆನಿ, ಮಂಗಳೂರು.

SOLE AGENTS:-

Anglo Indian Drug & Chemical Co.,
155 Jumma Masjid—Market,
P. O. Box 2082 BOMBAY.

ಪೃಥ್ವೀಸಿಂಹನ ಕೊನೆಗಾಲ.

ಲೇಖಕರು:—ಶ್ರೀ॥ ಕೆ. ಈಶ್ವರ, ನಿರೇಶ್ವಾಲ್ಯ, ಮಂಗಳೂರು.

ಪ್ರಭಾತಕಾಲ. ಡಿಲ್ಲಿಯಲ್ಲಿ ಭಾರತ ಬಾದಷಹನ ಅರಮನೆಯಲ್ಲಿ ಓಲಗದ ವ್ಯವಸ್ಥೆಯು ಒತ್ತರದಿಂದ ಸಾಗುತ್ತಿತ್ತು—ಸಾಗಿತ್ತು. ಚಿತ್ರವಿಚಿತ್ರವಾದ ಆ ಮಯೂರಾಸನದಲ್ಲಿ, ಮೊಗಲಾಯೀ ಫಖೀರ ಅವರಂಗಜೇಬ ಬಾದಷಹನು ಮಂಡಿಸಿದ್ದನು. ಅವನ ಬಲದಿಕ್ಕಿನಲ್ಲಿ ಮಾರ್ವಾಡ ಕುಮಾರ ಪೃಥ್ವೀಸಿಂಹನು ಆಸೀನನಾಗಿದ್ದನು. ಓಲಗದ ಹಜಾರವು ಡಿಲ್ಲೀ ಸಿಂಹಾಸನದಲ್ಲಿ ನಿಷ್ಠೆಯುಳ್ಳ ಮಾಂಡಲಿತ ರಾಜರಿಂದಲೂ, ನಾಯಕರಿಂದಲೂ, ಪ್ರಮುಖ ಜನರಿಂದಲೂ ತುಂಬಿಹೋಗಿತ್ತು.

ಮಾರ್ವಾಡದ ರಾಣಾಜಸವಂತಸಿಂಹನು ವೀರನು; ಸ್ವದೇಶಾಭಿಮಾನಿಯು. ಸುರೂಪನೂ ಅಹುದು. ಅವನ ಪತ್ನಿ ರಾಣೀ ಚಂದ್ರಾವತಿಯು ಸುರೂಪಿಯು ಸುಶೀಲೆಯು. ವೀರರಮಣಿಯವಳಾಗಿದ್ದಳು. ಅವರ ಪ್ರೇಮದ ಪುತ್ರನೇ ಪೃಥ್ವೀಸಿಂಹನು. ತೆಳ್ಳಗಿನ ಬೆಳ್ಳಗಿನ ತನುವವನದಲ್ಲ. ಕಬ್ಬಿಣದಂತಹ ಕಪ್ಪಾದ, ಉಬ್ಬಿದ, ಉರುತಿನ ಕಾಯವೂ ಅವನದಲ್ಲ. ಬಲಿಯುದ ಬೆಳ್ಳಗುವಿನ ವದನ, ಕಾಂತಿಯುಕ್ತ ಕೋಮಲ ಕಾಯ. ಅವನಾ ಉಜ್ವಲ-ಮಾಧುರ್ಯ-ಮೋಹಕ ಮೊಗವು ಜನನೀ ಜನಕರ ಪ್ರತಿರೂಪವೇ ಆಗಿತ್ತು.

ಆವ ರಾಜನು, ಆವ ಅತ್ಯುಚ್ಚ ಅರಸಿಯ ಆರಾಧನೆ-ಆರಾಮಕ್ಕಾಗಿ—ಆರ್ಯಾವರ್ತದ ಚಿತ್ರಕಲೆಯ ಪುನರುದ್ದೀಪನಕ್ಕಾಗಿ—ತಾಜಮಾಹಾಲ್, ಜುಮ್ಮಾಮಸೀದಿ, ಮೋತಿ ಮಸೀದಿ ಮೊದಲಾದ ಕಟ್ಟಡಗಳನ್ನು ಕಟ್ಟಿಸಿದನೋ, ಅವನೇ ಆ ಅರಸ ಷಾಜಾಹಾನ ಚಕ್ರವರ್ತಿಯ ಮೋಹಕ ಮಗನೇ, ಅವರಂಜೇಬನೇ, ಪಟ್ಟವನ್ನೇರಿದನು. ಸಹೋದರಿ ರೋಷನಾರಾ ಬೇಗಮೆಯ ಸಹಾಯದಿಂದ ಪೂಜ್ಯಪಿತನಿಗೆ ಕಾರಾಗ್ರಹವಾಸವನ್ನನುಭವಿಸಗೊಟ್ಟು, ಬಂಧುಗಳ ರಕ್ತ ಪ್ರವಾಹದಿಂದಲೇ ಗದ್ದುಗೆಯನ್ನೇರಿದನು—ಅವರಂಗಜೇಬ ಬಾದಷಹನು.

ಅವರಂಗಜೇಬ ಬಾದಷಹನು ಅಚ್ಚ ಮುಸಲ್ಮಾನನು; ಸರಳ, ಧಾರ್ಮಿಕ ನಿಯಮನಿಷ್ಠನವನು. ಭಂಡನಲ್ಲವು. ಹೆಂಡ ಕುಡುಕನೂ ಅಲ್ಲವು. ಬಾಹುಬಲದಿಂದ—ಕತ್ತಿಯ ಕೊನೆಯಿಂದ—ಕಾಲೊದೆತದಿಂದ, ಧರ್ಮದ ಪ್ರಚಾರವಾದೀತೆಂದು ಅವನ ವಿಶ್ವಾಸ. ರಾಜಭಕ್ತಿಯು ದಬ್ಬಾಳಿಕೆಯಿಂದ ಉತ್ಪನ್ನವಾದೀತೆಂದು ಅರಿತು, ಅದನ್ನು ಆಚರಣೆಗೆ ತರಲು ಪ್ರಯತ್ನಿಸಿದವನವನು. ಅವನ ಕಣ್ಣಿಗೆ ಮೊಳೆಯಾಗಿ, ಕಾಲಿಗೆ ಮುಳ್ಳಾಗಿ ಕಂಡವರೊಬ್ಬರಲ್ಲಿ ಜಸವಂತಸಿಂಹನೊಬ್ಬನು- ಜಸವಂತನ ಶಕ್ತಿಸಾಮರ್ಥ್ಯಗಳನ್ನು ಕಂಡ ಅಲಮಗೀರನು ಕಂಕುಳಲ್ಲಿ ಕತ್ತಿಯನ್ನಿಟ್ಟು, ಬಾಯಿಯಲ್ಲಿ ಬೆಲ್ಲದಂತಹ ಮಾತುಗಳನ್ನಾಡುತ್ತಿದ್ದನು. ಕಾಬೂಲಿಯರ ಕಾಟವನ್ನು ಕುಗ್ಗಿಸಲು ಜಸವಂತನನ್ನು ಕಳುಹಿದರೆ, ಅಲ್ಲಿ ಅವನ ಅಂತಿಮ ಅವಸಾನವಾದೀತೆಂದು ಅರಿತು, ಆವನನ್ನಾ ಕೆಲಸಕ್ಕೆ ನೇಮಿಸಿದನು. ಜಸವಂತಸಿಂಹನು ಕಾಬೂಲಿನ ಗುಡ್ಡಗಾಡು ಪ್ರದೇಶಗಳಲ್ಲೆಲ್ಲಾ ಅಡ್ಡಾಡಿ, ಅಲ್ಲಸಲ್ಲದ ಕಷ್ಟನಷ್ಟಗಳನ್ನನುಭವಿಸಿದನು. ಪ್ರತಿಫಲವಾಗಿ ಕಾಬೂಲಿನ ಕಲ್ಲುಗಳು ಕರಗಿದುವು. ಮರಗಳು ಮರುಗಿದುವು.

ಹಿಂದೂಗಳು ಸಾಧಿಸಿದರೆ ಸಬಳ ನುಂಗುವರೆಂದೂ, ಕಾರ್ಯಸಾಧಕರೆಂದೂ ಮನಗಂಡ ಅವರಂಗಜೇಬನು ಆಶ್ಚರ್ಯಗೊಂಡನು. ಹಿಂದೂಸ್ಥಾನದ ಬಂಧನವನ್ನು ಬಲಪಡಿಸುವ—ಪಡಿಸಿದಾ ಕಾಮುಕನು, ಜಸವಂತನ ರಾಣಿಯನ್ನು ಕಾಮಿಸುತ್ತಿದ್ದನು. ಅದೇ ಆ ಮಾತೆಯ, ಆ ದೇವಿಯ, ಆ ರಾಣಿಯ ಲಭ್ಯಕ್ಕಾಗಿ ಪ್ರಥ್ವೀಸಿಂಹನನ್ನು ಸನ್ಮಾನಿಸುವ ನೆವದಿಂದ ಅವನನ್ನು ಡಿಲ್ಲಿಗೆ ಬರಮಾಡಿಕೊಂಡನು.

ಸಭೆಯಲ್ಲಿ ಮೊಗಲಾಯೀ ಚಕ್ರವರ್ತಿಯು ಪ್ರಥ್ವೀಸಿಂಹನನ್ನು ತೆರತೆರನಾಗಿ ಹೊಗಳಿದನು. ಅವನಿಗೆ ಸ್ವಂತ ಕೈಗಳಿಂದಲೇ ಸನ್ಮಾನ ದುಡುಗೊರೆಯನ್ನು ಉಡಿಸಿದನು. ಆ ಉಡುಗೊರೆ— ಅದೇ ಆ ಅಂಗಿಯು ಅದೆಷ್ಟು ಅಂದ ಹೊಂಬಣ್ಣದಿಂದ ಮಿರುಗಿ, ಅರುಣಕಿರಣದಂತೆ ಬೆಳಗಿಜಗಜಗ್ಗೆಂದು ಬಾಹ್ಯದೃಷ್ಟಿಯಲ್ಲಿ ಹೊಳಪುಹುಟ್ಟಿಸುತ್ತಿದ್ದರೂ ಆ ಅಂಗಿಯು ಅಂತರ್ಯದಲ್ಲಿ ಅದೊಂದು ಅಶುಭವಸನವೆಂಬಂತೆ ಅನಿಸುತ್ತಿತ್ತು. ನೀಳವಾದ ಮಡುವಿನಲ್ಲಿ, ಶಾಂತವಾದ ಜಲವು ಕಾಂತಿಮುದ್ರೆಯಿಂದ ನೀಲಾಕಾಶವನ್ನೂ, ಅದರಲ್ಲಡಿಯಿಡುವ ನಯನ-ಮನೋಹರ ದೃಶ್ಯಗಳನ್ನೂ ಬಿಂಬಿಸುತ್ತಿದ್ದರೂ, ಅದೇ ಆ ಮಡುವಿನಲ್ಲಿಯೂ,ಅದೇ ಆ ಜಲದಲ್ಲಿಯೂ ಆ ಮೊಸಳೆಯೊಂದು ಅಡಗಿದ್ದಿರಕೂಡದೇಕೆ? ಪ್ರಥ್ವೀಸಿಂಹನು ಸುಹಾಸ್ಯಮುಖನಾಗಿ ಕೃತಜ್ಞತೆಯನ್ನು ಸೂಚಿಸಿದನು. ಸಭೆಯುಂದಿಗೆ ಕರತಾಡನದೊಂದಿಗೆ ಲೀನವಾಯಿತು. ಆದರೆ—ಹಾ!—ಅದೇನು?

ಪ್ರಥ್ವೀಸಿಂಹನಾ ಉಡುಗೆಯನ್ನು ಉಡಿಸಿಕೊಂಡ ಕೆಲವು ಕ್ಷಣಗಳಲ್ಲೇ ವಿಷದಿಂದ ಜರ್ಝರನಾಗಿ ಯಾತನೆಯಿಂದ ತಲ್ಲಣಿಸಿದನು. ಆ ಸರಳ ಬಾಲನು ಮಾರ್ಧ್ವನಿಗೈಯುತ್ತಾ ಮಲಗಿದನು. ಮಲಗಿದಲ್ಲಿಂದ ಮತ್ತೇಳಲಿಲ್ಲ. ಅಕಸ್ಮಾತ್ತಾಗಿ ಅದು ಹೇಗೆ ಸತ್ತನು? ಕಾಲನ ಕಾಟದಿಂದಲೇ? ಮಾಯೆಯ ಮಾಟದಿಂದಲೇ? ಉಡುಗೆಗೆ ವಿಷ ಬಳಿದಿದ್ದಿತು. ಸಭೆಯುವರದನ್ನು ಅರಿತ್ತಿರಲಿಲ್ಲ. ಮಾತ್ರವಲ್ಲ ಚಂದ್ರಾವತಿತನಯನು ಅದನ್ನು ತಿಳಿದಿರಲಿಲ್ಲ. ಕಟುಕನು ಕಠೋರನಾಗಿ ಕತ್ತಿಯಿಂದ ಕೊರಳನ್ನು ಕೊಯ್ಯುವನೆಂದು ಕನಸನ್ನು ಕಂಡಿತ್ತೇ—ಆ ಕುರಿಯು?

To distrory an oppressive force is to obey the word of God.—*Gandhi.*

ಸ್ವೀಕಾರ ಮತ್ತು ವಿಮರ್ಶೆ.

ಅಹಿಂಸೆ.

ಧರ್ಮದಲ್ಲಿ ಮಹಾಧರ್ಮವೆಂದರೆ ಅಹಿಂಸೆ. ಅಹಿಂಸಾಪರಮೋಧರ್ಮವೆಂಬುದು ಕ್ರೈಸ್ತ ಬುದ್ಧ, ಜೊರಾಸ್ಟ್ರಿಯನ್, ಗಾಂಧಿ ಮೊದಲಾದ ವಿಭೂತಿಪುರುಷರ ವೇದ. ಇಂತಹ ಮಹಾನ್ ವಿಷಯವನ್ನು ಜನಮನಾಕರ್ಷಕವಾಗುವಂತೆ ಬೋಧಿಸುವ ತ್ರೈಮಾಸಿಕ ಪತ್ರಿಕೆಯೆಂದರೆ ಕನ್ನಡದಲ್ಲಿ ನಮ್ಮ ಬಂಧು 'ಅಹಿಂಸೆ'ಯೊಂದೇ. ಇದರ ರಕ್ಷಾಪತ್ರದಲ್ಲೇ ಸಂಪಾದಕರಾದ ಶ್ರೀ। ಕರ್ಲಮಂಗಲಂ ಶ್ರೀಕಂಠಯ್ಯ, ಮತ್ತು ಇದರ ಆಶ್ರಯದಾತರಾದ ಅನೇಕಾನೇಕ ಮಹನೀಯರ ಮನೋವಿಶಾಲತೆಯು ಗೋಚರಿಸುವುದು. ಈ ತ್ರೈಮಾಸಿಕದಲ್ಲಿ ಪ್ರಾಣಿದಯಾಪರತೆ, ಗೋರಕ್ಷಣೆ, ಮೊದಲಾದ ಅಮೋಘ ವಿಷಯವಿಮರ್ಶೆಯು ಸದಾ ಪ್ರಕಟವಾಗುತ್ತಿದೆ. ಇಂತಹ ಅಮೂಲ್ಯ ಗ್ರಂಥಗಳು ಪತ್ರಿಕೆಯ ರೂಪದಿಂದ ಹೊರಬಿದ್ದಿರುವುದು ಕನ್ನಡಿಗರ ಭಾಗ್ಯದಿಂದಲೇ ಎಂದೆನ್ನಬೇಕು. ಇದರ ಚಂದಾಹಣ ವರ್ಷಕ್ಕೆ ಒಂದು ರೂಪಾಯಿ. ಇದು ಬೇಗನೇ ಮಾಸಿಕ ಪತ್ರಿಕೆಯಾಗಿ ಕನ್ನಡಿಗರ ಸೇವೆಯನ್ನು ಮಾಡಲೆಂದು ನಾವು ಭಗವಂತನೊಡನೆ ಪ್ರಾರ್ಥಿಸುವೆವು. ಇದನ್ನು ಪ್ರತಿಯೊಬ್ಬರೂ, ಅದರಲ್ಲೂ ನಮ್ಮ ವಾಚಕರೆಲ್ಲರೂ ತಪ್ಪದೆ ತರಿಸುವರಾಗಿ ಕೋರುತ್ತೇವೆ. ವಿಳಾಸ— ಅಹಿಂಸೆ ಕಾರ್ಯಾಲಯ. ಮಾಗಡಿ ಬೆಂಗಳೂರು.

ಜ್ಯೋತಿಷ್ಯ ವಿಚಾರ ಸಾಗರ.

ಶಿವಮೊಗ್ಗೆಯ ಜೋತಿಶ್ಯಾಸ್ತ್ರ ವಿಶಾರದ ಶ್ರೀ। ಲಿಂಗಾಜೋಯ್ಸರ ಸಂಪಾದಕತ್ವದಿಂದ ಹೊರಡುವ ಮಾಸಪತ್ರಿಕೆಯಿದು. ಇದರ ಸ್ವೀಕಾರವನ್ನು ನಮ್ಮ ಕಳೆದ ಸಂಚಿಕೆಯಲ್ಲಿ ಕಂಡು ಹಲಕೆಲವರು ನಮ್ಮಲ್ಲಿಗೆ ಬಂದು ಪತ್ರಿಕೆಗಳ ಎಲ್ಲಾ ಸಂಚಿಕೆಗಳನ್ನು ನೋಡಿ ಆನಂದಪಟ್ಟು ತಾವು ತರಿಸದಿರಿವೆಂದು ಆಶ್ವಾಸನೆಯಿತ್ತರು. ಈ ಮಾಸಿಕದಲ್ಲಿ ಜ್ಯೋತಿಶ್ಯಾಸ್ತ್ರ ಸಂಬಂಧವಾದ ಲೇಖಗಳು—ಅಂದರೆ ಜಾತಕ, ಪಂಚಾಂಗ, ಗ್ರಹಣ, ಮುಹೂರ್ತ, ಸ್ತ್ರೀಲಕ್ಷಣ, ಪುರುಷಲಕ್ಷಣ, ಮಾಸ ಪಕ್ಷ ತಿಥಿ ವಾರ ನಕ್ಷತ್ರಫಲ ಮೊದಲಾದ ಅಮೋಘ ವಿಷಯಗಳು ವರ್ಣಿತವಾಗುತ್ತಿವೆ, ಪ್ರತಿಯೊಬ್ಬನೂ ಓದ ತಕ್ಕದ್ದು. ಅಂಚೆವೆಚ್ಚ ೧—೮—೦ ಪರಸ್ಥಳಕ್ಕೆ ೨ ರೂಪಾಯಿ. ವಿಳಾಸ—ಜ್ಯೋತಿಷ್ಯ ವಿಚಾರ ಸಾಗರ ಕಾರ್ಯಾಲಯ—ಶಿವಮೊಗ್ಗ.

ಸ್ವದೇಶೀ ಪ್ರಚಾರಕ— ಮಂಗಳೂರು.

ಇದು ಒಂದು ಬೆಲೆ ಬಾಳುವ ಮಾಸಿಕ. ಬರೇ ನಾಮಮಾತ್ರದಿಂದ ಧ್ಯೇಯವು ಸೂಚಿತವಾಗಿದೆ. ಬಡವರ ಬಂಧು ಗಾಂಧಿಜೀಯವರ ಉದ್ದಿಷ್ಟವಾದ ಸ್ವದೇಶೀಯ ಪ್ರಚಾರವನ್ನು ಈ ಮಾಸಿಕವು ನಿರಂತರವಾಗಿ ಮಾಡಲೆಂದು ಹಾರೈಸುವೆವು. ಚಂದಾ ಹಣ ಅಂಚೆವೆಚ್ಚ ರಹಿತ ೧ ರೂಪಾಯಿ ಮಾತ್ರ.

ಕರ್ನಾಟಕ ಕ್ರೈಸ್ತಬಂಧು— ಮಂಗಳೂರು.

ಕರ್ಣಾಟಕದ ಕ್ರೈಸ್ತ ಬಂಧುವೆಂದರೆ ಎಂತಹ ಲಾಭದೃಷ್ಟಿಯಿಂದಾದರೂ ಜನನಕ್ಕೆ ಬಂದ ಮಾಸಿಕವಲ್ಲ. ಕರ್ಣಾಟಕದ ಸಮಸ್ತ ಕ್ರೈಸ್ತರ ಹಿತವನ್ನೇ ಇದು ಕೋರಿ ನೈತಿಕ ಧಾರ್ಮಿಕ ವಿಚಾರಗಳನ್ನು ಪ್ರಕಟಿಸುತ್ತಿದೆ. ಸಂಪಾದಕರ ಯತ್ನವು ಅಭಿನಂದನೀಯವಿದೆ. ಸಮಸ್ತರೂ ಇದನ್ನು ಪ್ರೋತ್ಸಾಹಿಸುವರಾಗಿ ನಂಬಿದ್ದೇವೆ. ವಾರ್ಷಿಕ ಚಂದಾ ೧-೪—೦.

ಪ್ರಖ್ಯಾತವಾದ ಬಾಸೆಲ್ ಮಿಶನ್ ಮುದ್ರಣಾಲಯದ ಮೆನೇಜರರಾದ ಮಿ। ಫ್ರೈಡ್ರಿಕ್ ರೌಲೀದರ್ ಇವರ ಸಂಪಾದಕತ್ವದಿಂದ ಹೊರಬೀಳುವ **All India Trade Magazine** ಇದರ ದ್ವಿತೀಯ ವಾ. ಪ್ರಥಮ ಸಂಚಿಕೆ ನಮ್ಮ ಹಸ್ತಗತವಾಗಿದೆ. ಪುಸ್ತಕದ ಸೌಂದರ್ಯದ ಅಳತೆಯನ್ನು ಈ ಮುದ್ರಣಾಲಯದ ಅಖಿಳ ಹಿಂದೂಸ್ಥಾನ ಖ್ಯಾತಿಯೊಂದರಿಂದಲೇ ಮಾಡಬಹುದು. ಈ ಮಾಸಿಕ ಪತ್ರಿಕೆಯು ವಾಣಿಜ್ಯ ಸಂಬಂಧವಾದ ಉಜ್ವಲ ಇಂಗ್ಲಿಷ್ ಲೇಖಗಳಿಂದೊಡಗೂಡಿ ವರ್ತಕರೇ ಮೊದಲಾದವರ ಸಂಪೂರ್ಣ ಪ್ರಯೋಜನಕ್ಕೆ ಬೀಳುವಂತಹುದು. ಇದು ಇತ್ಯೋಪತಿಶಯವಾಗಿ ಬೆಳಗಿ ಮಂಗಳೂರಿಗೆ ಖ್ಯಾತಿ ತರಲಿ. ವಾರ್ಷಿಕ ಚಂದಾ ಹಣ ಅಂಚೆ ಸೇರಿ ೨ ರೂಪಾಯಿ.

ಮಡಿವಾಳನ ಮಾತಿನಿಂದಾಗಿ ಶ್ರೀ ರಾಮನು ಸೀತೆಯನ್ನು ವನದಲ್ಲಿ ಬಿಟ್ಟು ಬರಲು ಲಕ್ಷ್ಮಣನಿಗಾಜ್ಞಾಪಿಸುವುದು; ಲಕ್ಷ್ಮಣನು ಅಣ್ಣನನ್ನು ಹೃದಯವೇದಕ ನುಡಿಗಳಿಂದ ಸೀತೆಯನ್ನು ತ್ಯಾಗಮಾಡಬಾರದೆಂದು ಅಂಗಲಾಚಿ ಬೇಡಿಕೊಳ್ಳುವುದು; ವನವಾಸವನ್ನನುಭವಿಸಿ ಬಂದ ಮೇಲೆ ಸೀತೆಯ ಸತ್ವಪರೀಕ್ಷೆ ಮಾಡುವುದು: ಇವುಗಳನ್ನೆಲ್ಲ ಹೃದಯಂಗಮವಾಗಿ ಸಂಭಾಷಣೆ ಮತ್ತು ಕಥಾ ರೂಪದಿಂದ ಸುಲಭ ಶೈಲಿಯಲ್ಲಿ ವರ್ಣಿಸುವ ಶ್ರೀಮತಿ ಪಣಪಿಲ ಅರಮನೆ ದೇಜಮ್ಮನವರ ಪ್ರಕಾಶತನದಿಂದ ಹೊರಟ 'ಸತ್ವಪರೀಕ್ಷೆ' ಎಂಬ ಚಿಕ್ಕ ಪಹಿಯು ಹಸ್ತಗತವಾಗಿದೆ. ಅತ್ಯುತ್ತಮ ಯತ್ನ. ಶ್ರೀ. ಎನ್. ಎಸ್. ಜೈನಿ. ನೆಲ್ಲಿಕಾರು ಪೋಸ್ಟು, ಕಾರ್ಕಳ, ಇವರಿಗೆ ಅರ್ಧಾಣೆ ತಲೆ ಚೀಟು ಕಳುಹಿಸಿದರೆ ಈ ಪುಸ್ತಕವು ಧರ್ಮಾರ್ಥವಾಗಿ ಸಿಗುತ್ತದೆ.

ಬೆಂಗಳೂರಿನ ಅಧ್ಯಾತ್ಮ ಪ್ರಕಾಶ ಕಾರ್ಯಾಲದ ಶ್ರೀ. ವೈ ಸುಬ್ಬರಾವ್ ಇವರ ಯತ್ನದಿಂದಾಗಿ ಹೊರಟ ಮೂರು ಉದ್ಗ್ರಂಥಗಳು ನಮ್ಮ ಕೈಸೇರಿವೆ. ೧. ತತ್ವಸಮಾಸ. ಇದು ವೇದಾಂತಕ್ಕೆ ಸಮೀಪಬಾಂಧವ್ಯವನ್ನು ತಂದೊಡ್ಡುವ ಸಾಂಖ್ಯದರ್ಶನ ಪ್ರತಿಪಾದನೆಯ ಪಹಿ. ಸಾಂಖ್ಯ ಮತ್ತು ವೇದಾಂತಗಳಿಗಿರುವ ತಾರತಮ್ಯಗಳು ಇದರಲ್ಲಿ ಸುರಸವಾಗಿ ವರ್ಣಿತವಾಗಿವೆ. ಅಥಿತಸ್ತತ್ವೇ ಸಮಾಸಃ ಮೊದಲಾದ ೨೨ ಖಂಡಗಳಿಂದ ಪರಿಶೋಭಿತವಾಗಿದೆ. ಈ ಗ್ರಂಥವು ಆಧ್ಯಾತಿಕ ವಿಚಾರ ವಿಮರ್ಶಕರಿಗೆ ಬಹಳ ಪ್ರಯೋಜನಕಾರಿಯಾದುದು (ಕ್ರಯ ನಾಲ್ಕಾಣೆ.) ೨. ಗಣೇಶಾಷ್ಟಕ. ಗಣೇಶ ಪುರಾಣದಿಂದ ಆರಿಸಲ್ಪಟ್ಟ ಕೆಲವು ತತ್ವಗಳನ್ನು ತಿಳಿಗನ್ನಡ ಭಾವಾರ್ಥ ವಿವರಣೆ ಮೂಲಕ ಹೊರಗೆಡವಿ ಈ ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಉಪನಿಷತ್ಸಿದ್ಧಾಂತವನ್ನು ಉತ್ಕೃಷ್ಟವಾದ ಉಬ್ಬಿನ ಕ್ರಮದಿಂದ ವರ್ಣಿಸಿರುವ ಸುಂದರ ಗ್ರಂಥವಿದು. ಇದೊಂದು ಗೀತೆಯಂತೆಯೇ ಇದೆ. ಪ್ರತಿಯೊಬ್ಬನೂ ಓದಬೇಕಾದುದು (ಕ್ರಯ ೩ ಆಣೆ.) ೩ ಬೆಂಗಳೂರಿನಲ್ಲಿ ಕಳೆದ ಮೇ ತಿಂಗಳಲ್ಲಿ ನಡೆದ ಶಂಕರ ಸಪ್ತಾಹದ ವೃತ್ತಾಂತ. ಅಧ್ಯಾತ್ಮಿಕ ವಿಚಾರಗಳ ಪ್ರಕಾಶನಕ್ಕಾಗಿ ಶ್ರೀ. ವೈ ಸುಬ್ಬರಾಯರು ಇಂತಹ ಸಪ್ತಾಹಗಳನ್ನೇರ್ಪಡಿಸಿ ಕನ್ನಡಿಗರಿಗೇ ಅಲ್ಲ, ಇಡೀ ಅಧ್ಯಾತ್ಮ ಲೋಕಕ್ಕೆನೇ ಸಹಾಯಮಾಡುತ್ತಿರುವರು. ಅವರ ಮತ್ತು ಅವರ ಸಹಾಯಕರ ಯತ್ನವು ಯಶಸ್ವಿಯಾಗಲಿ.

ಪತ್ರವ್ಯವಹಾರ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಬ. ಬ.

ಅಯ್ಯಾ "ಬಡವರ ಬಂಧು"ವೇ,

ನಿನ್ನ ನವಂಬರ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಬಂಟ್ವಾಳ ಶ್ರೀ. ಬಾಳಿಗರ 'ಸಿರಿಮದ'ದ ಕಥೆಯಲ್ಲಿ ತೋರುವ ಒಂದು ಅಬದ್ಧ ವಿಷಯವನ್ನು ನಾನು ಖಂಡಿಸಬೇಕಾಗಿರುವುದಕ್ಕೆ ತುಂಬಾ ವಿಷಾದಪಡುತ್ತೇನೆ. ಆಧುನಿಕ ಪ್ರಗತಿಯ ಮಹಿಮೆಯಿಂದ ಹಿಂದೂಗಳಲ್ಲಿ ಉತ್ತಮರೆನಿಸಿರುವ ಬ್ರಾಹ್ಮಣರಲ್ಲಿ ಕೂಡ ಹಲಕೆಲವು ಮಾಂಸಾಹಾರಿಗಳು ಈಗ ದೊರೆಯುವುದು ವಿಚಿತ್ರವಲ್ಲ. ಆದರೆ ದಕ್ಷಿಣಕನ್ನಡದ ಮುಸ್ಲಿಮರು ವಿದ್ಯೆಯಲ್ಲಿ ಹಿಂದುಳಿದಿರುವರಾದರೂ, ಮಾಂಸಾಹಾರಿಗಳಾದರೂ, ಸತ್ತ ಜೀವಿಯ ಹಾಗೂ, 'ಮಾರಿ'ಗಾಗಲಿ 'ಅಮ್ಮ'ನಿಗಾಗಲಿ ತಲೆಗಡಿದ ಪ್ರಾಣಿಯ ಮಾಂಸವನ್ನು ಸ್ವೀಕರಿಸುವಷ್ಟು ಸುಧಾರಣೆಗೆ ಬಂದಿಲ್ಲವೆಂದು ಆನಂದದಿಂದ ಹೇಳಬಹುದು. ಇದರಿಂದ " 'ಅಮ್ಮನ' ಪ್ರಸಾದವನ್ನು ಶೆಟ್ಟರು ಇಬ್ರಾಹಿಮನ ಮನೆಗೆ ಕಳುಹಿಸಿದ" ವಿಷಯವು ಕೇವಲ ಅಬದ್ಧವೆಂದು ಸರ್ವರೂ ಒಪ್ಪಿಕೊಳ್ಳಬೇಕಾದ ಸಂಗತಿ.

ಮುಸ್ಲಿಮ್ ಬಂಧು.

ಕಥೆಯೆಂದರೆ ಕೇವಲ ಕಾಲ್ಪನಿಕ. ಅಮ್ಮನವರ ಪ್ರಸಾದವನ್ನು ಶೆಟ್ಟರು ಉಗ್ರಾಣಿಯ ಮೂಲಕ ಇಬ್ರಾಹಿಮನಿಗೆ 'ಕಳುಹಿಸಿದರೆಂದರೆ ಇಬ್ರಾಹಿಮನು ಅದನ್ನು 'ಸ್ವೀಕರಿಸಿದನೆಂದಾಗುವುದಿಲ್ಲ.

ಸಂ. ಬ. ಬ.

ಮೈಸೂರ್ ನರ್ಸಣ್ಣನ ಟೀಕೆ!

(TIT-BITS.)

ಸಲಾಂ ದೇವ್ರೆ। ನಿಮ್ಮೂರ ಗಾಡೀವಾಲ ನಿಂದ ಪೆಟ್ಟು ತಿಂದು ಆಸ್ಪತ್ರೆಯಲ್ಲಿ ಬಿದ್ದೆ ಅಷ್ಟೆ! ಸುಮಾರು ಹನ್ನೆರಡು ದಿವ್ಸಗಳ ತನ್ಕ ನಾನು ಆಸ್ಪತ್ರೆಯಲ್ಲಿದ್ದೆ. ಕೆಲ್ಸವಿಲ್ಲದವ್ರಿಗೆ ಆಸ್ಪತ್ರೆಯ ಮಂದಿರ ಒಳ್ಳೆದಯ್ಯ! ದೊಡ್ಡ ದೊಡ್ಡ ರೊಟ್ಟಿ, ಬಿಸಿ ಹಾಲು ಬಿಸಿ ನೀರು, ಕಹಿ ಮದ್ದು ಸಿಗುತ್ತೆ. ಅಲ್ಲಿ ನಾ ಕಂಡದ್ದೆಂದರೆ–ಕಂಪೌಂಡ್ರು ಗಳು ಬಾಯಿ ಬಾಯಿ ಬಿಡುವಂತಹುದು. ಕಾಸು ಕೊಟ್ಟಾವನ ಕಾಲ್ಕೈ ಘಾಯವನ್ನು ಮೆಲ್ಲಗೆ ಜಾಗ್ರತೆಯಿಂದ ತೊಳೀತ್ತಾರೆ. ಇಲ್ಲದಿದ್ರೆ ಪಡ್ಚ! ಘಾಯದ ಮೇಲೊಂದು ಘಾಯವಾಗ್ವಂತೆ, ಜೇಬಿನಿಂದ ಕಾಸು ಪಟಕ್ಕನೆ ಹೊರಬೀಳ್ವಂತೆ, ಒತ್ತಿ, ತಿಕ್ಕಿ ತೊಳೀತಾರ್ರಿ. ದಾಕ್ತಾರ್ರಿಗೆ ಇದು ಹೇಂಗೆ ಗೊತ್ತು?

× × × ×

ಆಸ್ಪತ್ರೆಯಿಂದ ನಾಳೆ ಹೋಗಬೇಕೆಂದಿದ್ದೆ–ಎಲ್ಲಾ ತಯಾರ್ ಮಾಡಿದ್ದೆ–ಮುಂಚಿನ ದಿನ ಬಂದರಯ್ಯ ಒಬ್ರು! ಕೈಯಲ್ಲಿ ರಿಕಾರ್ಡು ಹಿಡ್ಕೊಂಡೇ ಬಂದ್ರು. ರಾಮಾಯಣಕ್ಕೆ ಮೊದ್ಲಾಯಿತು! "ಎಂಟಾಣೆ ಪೊಲಿಸಿ ಇದೆ! ನೀವು ಆಸ್ಪತ್ರೆ ಹಿಡಿದಿದ್ದೀರಿ! ಹೆಂಡ್ತಿ ಮಕ್ಕಳಿಗೆ ಬೇಗನೇ ಹಣ ಸಿಕ್ಕುತ್ತೆ! ನೀವು ಸತ್ತ ಕೂಡಲೇ ಹಣ ಪಾವತಿ ಮಾಡ್ತೇವೆ" ಎಂದ್ರು ಏಜಂಟ್ರು. ಇದೇ "Greatest Company, Limited"ನಲ್ಲಿ ನನ್ನ ತಮ್ಮ ಮೈಸೂರ್ ಕೂಸಣ್ಣನು ಇನ್ಶೂರ್ ತೆಗ್ದಿದ್ದ. ಒಂದು ಕಂತು ಕಟ್ಟಿ ಒಂದು ವರ್ಷ ಕಳೆದ್ರೂ ಆವ ಕಂತು ಕೊಡ್ಲಿಲ್ಲ. ಕಂಪ್ನಿಯ 'ಡ್ಯೂ' ನೋಟಿಸ್ ಕಾಣೆ! ಇಂತಹ ಎಷ್ಟು ಕಂಪ್ನಿಗಳಿವೆ?

× × × ×

ಆಸ್ಪತ್ರೆಯಿಂದೆದ್ದ ಕೂಡಲೇ ನನ್ ತಲೆ ಗರಂ ಗರಂ। ಆಯಿತು. ಹೊಟ್ಟೆ ಸುಮಾರು ಇಳಿದು ಹೋಗಿತ್ತು. ಗಡ್ಡ ಉದ್ದುದ್ದ ಬೆಳೆದಿತ್ತು. ದಾಕ್ತಾರ್ರಿಗೆ ಸಲಾಂ ಕೊಟ್ಟು ಗೇಟಿನ ಹೊರಬಿದ್ದೆ. ನಾನು ಹೊರಬರುತ್ತಿರುವುದನ್ನು ನರ್ಸ್‌ಗಳು ಇಬ್ಬರು ದುಃಖದಿಂದ ನೋಡುತ್ತಿದ್ದರು. ಪಾಪ! ಅವರಿಗೆ ಕಾಸು ಸಿಕ್ಕೀತೆಂಬ ಆಶೆಯಿತ್ತು—ಸೀದಾ ಇಲ್ಲಿಯ ಬೊಂಬಾಯಿ ಸೆಲೂನಿಗೆ ಹೋದೆ. ಕುರ್ಚಿ ಮೇಲೆ ಕುಳಿತೆ. ಇಪ್ಪತ್ತಾರು ಜನ್ರ ಗಡ್ಡಮುಖಕ್ಕೆ ತಗ್ಲಿಸಿದ ಸೋಪ್ ಬ್ರಶ್‌ನ್ನು ಇಪ್ಪತ್ತೈದು ಜನ್ರ ಸೋಪನ್ನು ತೊಳ್ದ ತಟ್ಟೆಗೆ ಮುಳ್ಗಿಸಿ, ಸೋಪನ್ನು ತಿಕ್ಕಿ ಗಡ್ಡಕ್ಕೆ ಹಚ್ಬಿಟ್ಟ ಮಾರಾಯಾ! "ಅದಂ ತೊಳೆಯೋ" ಎಂದೆ. . . "ಹೋಗ್ರೀ. ಸೋಪ್ ನಷ್ಟವಾಗ್ವದಿಲ್ವೆ? ಎಂದು ಅವ್ನ ಉತ್ರ. ಕ್ಷೌರಿಕ್ರು ಸುಧಾರಣೆ ಆಗಬೇಡ್ವೆ?

× × × ×

ಅರ್ಧ ಗಡ್ಡ ತೆಗೆವುತ್ತಾ ಕ್ಷೌರಿಕ ನಂಗೆ ಪ್ರಶ್ನೆ ಹಾಕ್ಬಿಟ್ಟ—"ಹೌದ್ರೀ ಘೋರ ದೇವ್ರೆ! ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡಂಟ್‌ಶಿಪ್ ಮಹಾರಾಜಶ್ರೀ ಮಹಾಬಲ ಹೆಗ್ಡೆಯವ್ರ ಕೈಯಿಂದ ಮಹಾರಾಜಶ್ರೀ ಎ. ಬಿ. ಶೆಟ್ರ ಜೇಬಿಗೆ ಬಿತ್ತಂತೆ!" ಎಂದು. ನಾನೆಂದೆ "ಜಾತಿಗೆ ಜಾತಿ————ಯಾರಾದ್ರೇನು? ಯಾರ್ ಹೋದ್ರೇನು? ಪ್ರೊವಿನ್ಸಿಯಲ್ ಟೇಕ್ಸ್, ಆ ತೆರಿಗೆ, ಈ ಕಂದಾಯ ಏರ್‍ತಾ ಹೋಗ್ತೆ. ಬಡವರ್‍ಗಾಗಿ ಕೆಲ್ಸ ಮಾಡ್ವವರಾರ್ರಿ"? ಎಂದು. ಕ್ಷೌರಿಕ ಹೇಳ್ದ "ಶೆಟ್ರು ಒಳ್ಳೇಯವ್ರು" ಎಂದು ನಾನೆಂದೆ "ಆಗ್ಬಹುದು, ಮುಂದಕ್ಕೆ ನೋಡ್ವ." ಎಂದು

× × × +

ಗಡ್ಡ ತೆಗ್ಸಿದ ಮೇಲೆ ಇಲ್ಲಿಯ ಕಿಷ್ಣ ಸಿನಿಮಾಕ್ಕೆ ಹೋದೆ. ಭಾರೀ ಜನ! ಎರ್ಡಾಣೆ ಕ್ಲಾಸಿನಲ್ಲಿ ಕುಳಿತಿದ್ದೆ. ಏನು ಬೆವ್ರು ಸ್ವಾಮಿ! ಕಂಪ್ನಿಯವ್ರ ಬೇಂಡ್ ಬೆವರನ್ನೇ ಹೊಯ್ಸುತ್ತದೆಂಬಂತ್ತಿತ್ತು! ನೋಡ್ತೇನೆ! ಎರ್ಡಾಣೆ ಕ್ಲಾಸಿಗೆ ಇಲೆಟ್ರಿ ಫೇನು ಇಲ್ಲ. ಒಂದು ರೂಪ್ಯಾ ಚಿಲ್ರೆಯವರ್‍ಗೆ ಉಂಟು—ತಂಪು ಗಾಳಿ! ನೋಡಿ ಬಡವರ್‍ಗೆ ಗಾಳಿಯೂ ಇಲ್ಲ! ರಾಯ್ರೆ ದಯಮಾಡ್ವಿರಾ? ಒಂದು ಗಿರಿಗಿರಿಟ್ ಫೇನ್ ಇಡ್ಬಾರ್‍ದಾ? ರಿಪೇರಿಗೆ ಹೋಗಿದೆಯಾ? ಹಿಂದುಸ್ಥಾನ ಸಿನಿಮಾದಲ್ಲೂ ಈ ಫೇನಿಗೆ ಅಭಾವ ಭಾರಿ!

(ಟಿಟ್‌--ಬಿಟ್ಸ್)

ಮರುದಿನ ನಿಮ್ಮೂರ ಒಂದು ಸುತ್ತು ತೆಗೇಬೇಕೆಂದು ಒಂದು ಸೈಕಲ್ ಆಫೀಸಿಗೆ ಹೋದೆ. ಹೊಸದೊಂದು ಬಾಡಿಗೆ ಸ್ಯಾಕಲ್ ತಕ್ಕೊಂಡೆ. ಆ ಸೈಕಲ್ ಮೇಲೆ ಕೂತು ವೆಂಟ್ರಮಣ ದೇವ್ರ ಮಾರ್ಗದಲ್ಲಿ ಬಂದೆ. ದೂರದಲ್ಲಿ ಮಾರ್ಗ ಕಾವ್ಲ ನಿಂತಿದ್ದ ಪೋಲೀಸನೊಬ್ಬ ದೊಡ್ಡ ದೊಡ್ಡ ಹೆಮ್ಮಕ್ಕಳ ನೋಡ್ವುದ್ರಲ್ಲಿ ತಲೆಯಿಟ್ಟಿದ್ದ–ನಾನು ಬೇಕೆಂದು ರೋಂಗ್ ಸೈಡಿನಲ್ಲಿ ಸೈಕಲ್ ಓಡ್ಸಿದೆ.

× × × ×

"ಇಳೀರಯ್ಯಾ! ಸೈಕಲಿಂದ!" ಎಂದ ಪೋಲೀಸಿನವ! ನಾನೆಂದೆ "ಹೋಗಯ್ಯ! ನನ್ನ ಸೈಕಲ್ ಹೋಗಲಯ್ಯಾ! ನೀನು ಹುಡುಗೀರ ನೋಡ್ತಾ ಕೊತ್ಕೊ!" ನನ್ನ ಸೈಕಲ್ ಓಡಿಯೇ ಬಿಟ್ಟಿತು. ನಾನೂ ಓಡಿದೆ. ಎದೆ ಮುಟ್ಟಿ ನೋಡ್ತೇನೆ ಥಡ್, ಥಡ್ ಎಂದು ಒಳಗೆ ಕುದುರೆಯ ಓಟದಂತೆ ನಡುಗುತ್ತಿತ್ತು! ಪೋಲೀಸರಲ್ವೆ? ಹೆದ್ರುಬೇಡ್ವೆ?

× × × ×

ಮೊನ್ನೆ ಭಾನುವಾರ ಬೆಳಿಗ್ಗೆ ೭ ಗಂಟೆಗೆ ನಾನು ನಿತ್ಯದಂತೆ ಖದ್ದರಿನ ಬಿಳೀ ಶರ್ಟು ಮತ್ತು ಟೋಪಿಯನ್ನು ಧರಿಸಿದ್ದೆ; ಮೈದಾನಿನ ಮಧ್ಯೆ ಗಾಳಿತಿನ್ನೋಕೆ ತಿರುಗುತಿದ್ದೆ. ಓಡಿ ಬಂದ್ರುಯ್ಯಾ ಹತ್ತಿಪ್ಪತ್ತು ಪೋಲೀಸ್ರು! ಅಂದು ತಿಂಗಳಾಂತ್ಯದ ವಾರವಾದುದರಿಂದ ಕೊಂಗ್ರೆಸ್ಸಿನವ್ರು ಧ್ವಜವಂದನೆಯಿತ್ತಂತೆ. ನಾನು ನನ್ನ ಧ್ವಜ ವಂದನೆ ಮಾಡಲು ಬಂದೆನೆಂದು ತಿಳಿದಿದ್ದ ಪೋಲೀಸ್ರು! "ಯಾರಯ್ಯಾ ನೀವು" ಎಂದ್ರು! ನಾನೆಂದೆ "ನಿಮ್ಮ ದೊಣ್ಣೆಯ ಧ್ವಜ ಕೋಲಿಗೆ ವಂದನೆ!" ನಾನು ಮೈಸೂರ್ ನರ್ಸಣ್ಣ! ಎಂದು

× × × ×

ನನ್ನ ಇಷ್ಟು ದೊಡ್ಡ ಉದರದ ಪೋಷಣೆಯೇ ನನಗೆ ಕಷ್ಟವಾಗಿದೆ! ನನಗೆ ಕೊಂಗ್ರೆಸ್ಸಿನ ಧ್ವಜವಂದನೆಯ ಸುದ್ದಿಯೇಕೆ? ಅಥವಾ ಪೋಲೀಸರ ಧ್ವಜಕೋಲಿನ ಅಭಿನಂದನೆಯೇಕೆ? ಆದ್ರೂ ನೋಡಿ! ಪೋಲೀಸ್ರು ಪೋಲೀಸರೇ! ಶಾಂತಿರಕ್ಷಕರಲ್ವೇ. ಅವ್ರು ಮಾಡುವುದು ಸರಿ . . .

× × × +

ಈಗ ನಿಮ್ಮೂರಲ್ಲಿ ಗಾಂಧಿ ಗಲಾಟೆಯಿಲ್ಲ! ಮಾರಿ ಹೋಯಿತು! ಆದುದರಿಂದ ಈಗ ನೋಡಿ ಬಿಸಿಲು ಕಾಯುತ್ತೆ. ನವಂಬ್ರದಲ್ಲೂ ಮಳೆ ಬರುತ್ತೆ. ಸೂರ್ಯ ಪೂರ್ವದಲ್ಲಿ ಮೂಡ್ತಾನೆ. ಅಕ್ಕಿ ಅಗ್ಗವಾಗಿದೆ. ಕಾಫಿ ಪ್ರಿಯವಾಗಿದೆ. ಕೊಂಗ್ರೆಸ್ ಸತ್ರೆ ಎಲ್ಲಾ ಒಳ್ಳೆದೇ ಆಗುತ್ತೆ! ಅದು ನಂಗೊತ್ತು. ಬಿಡಿ ಆ ಗಡಿಬಿಡಿಗಾರರ ಸುದ್ದಿ. ಬಿಳಿ ಮತ್ತು ಕೆಂಪು ಟೋಪಿಗಳೇ ನೋಡಿಕೊಳ್ಳಲಿ!

× × × ×

ಬೇಸಿಗೆ ಕಾಲ ಬಂತು! ನಿಮ್ಮೂರ ಮುನಿಸಿಪಾಲಿಟಿಯವ್ರ ನೀರಿನ ಬಂಡಿಗಳು ಓಡುವುದು ಕಾಣುತ್ತಿಲ್ಲ. ದೂಳು ತಿಂದು ಜನ್ರು ಅರ್ಧ ಕರ್ಗಿದ ಮೇಲೆ ಈ ಗಾಡಿಗಳು ನೀರ್ ತುಂಬಿ ಮಾರ್ಗಗಳಲ್ಲಿ ಓಡಾಡಿ, ದೊಡ್ಡವರ ಮಾರ್ಗಕ್ಕೆ ಹೆಚ್ಚು ನೀರು, ಬಡವರ ಮಾರ್ಗಕ್ಕೆ ಸ್ವಲ್ಪ ನೀರು ಚಿಮುಕಿಸಿದ್ರಾಯ್ತು. ಜೈ ಮೋಟರ್‌ಗಾಡಿಕೀ!

× × × ×

ಮೊನ್ನೆ ನವಯುಗ ಓದುತ್ತೇನೆ. ಅದರಲ್ಲಿ "ತತ್ವ ಶೋಧಕ"ನೆಂಬವನು ಬ. ಬ.ನ ಒಕ್ಟೋಬ್ರ ತಿಂಗಳ ಬ್ಯಾಂಡಿನ ಪ್ರಾರ್ಥನೆಯ ಮೇಲೆ ಟೀಕೆ ಹೊರ್‍ಸಿದ್ದಾನೆ. "ಕುಂಬಾರಗೇಕೆ ಅಂಬಾರಿ ಸುದ್ದಿ?" ಎಂದು ನನ್ನ ಪ್ರಶ್ನೆ!

× × × ×

ನನ್ನ ಪಿರ್ತಿಯ ಹೆಂಡ್ತಿಯು ಮೈಸೂರಲ್ಲಿ ಪಜೀತಿಯಲ್ಲಿ ಬಿದ್ದಿದ್ದಾಳೆಂದು ತಂತಿ ಬಂದಿದೆ. ಮೂರು ಮಕ್ಳನ್ನು ಒಮ್ಮೆಲೆ ಹೆತ್ತಿದ್ದಾಳಂತೆ. ನೋಡ್ರಿ ರಾಯ್ರೇ ಕಷ್ಟ ಬಂದ್ಬಿಟ್ರೆ ಮೇಲೆ ಮೇಲೆ ಬರುತ್ತೆ! ನನ್ನ ಹೆಂಡ್ತಿ ಪ್ರತಿ ವರ್ಷ ಹೆರುವುದು ತ್ರಿಮೂರ್ತಿಗಳನ್ನೆ! ದೊಡ್ಡ ಆಶ್ಚರ್ಯವಲ್ವೇ? ಉಡುಪಿಯ ಸನಾತನ ಧರ್ಮೋಜ್ಜೀವಿನಿ ಸಭೆಯವರೊಡನೆ ಕೇಳ್ಬೇಕು. ಅನೇಕ ಪಂಡಿತ್ರಿದ್ದಾರೆ ಅವ್ರಲ್ಲಿ! ಹೋಗಿ ಬರ್‍ತೇನೆ ರಾಯ್ರೆ! ಬೀಳ್ಕೊಂಡೆ.

We may not cling to putrid customs and claim the pure boon of Swaraj.—*Gandhi.*